ಸಂಸ್ಥೆಯ ರೋಗ ಲಕ್ಷಣ ಶಾಸ್ತ್ರ ವಿಭಾಗಕ್ಕೆ ಅಗತ್ಯವಿರುವ ಉಪಕರಣಗಳನ್ನು ಅಂದಾಜು ಮೊತ್ತ ರೂ.35.00 ಲಕ್ಷಗಳು (ಜಿ.ಎಸ್.ಟಿ. ಹೊರತುಪಡಿಸಿ), ಸದರಿ ವೆಚ್ಚವನ್ನು ಸರ್ಕಾರದಿಂದ ಬಿಡುಗಡೆಯಾಗುವ ಲೆಕ್ಕ ಶೀರ್ಷಿಕೆ 103 ಅಡಿ ಭರಿಸುವುದು ಹಾಗೂ ಕೆ.ಟಿ.ಪಿ.ಪಿ ನಿಯಮಾನುಸಾರ ಇ–ಟೆಂಡರ್ ಪ್ರಕ್ರಿಯೆ ಕೈಗೊಳ್ಳುವುದರ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲು ವಿಷಯವನ್ನು ಆರ್ಥಿಕ ಸಮಿತಿ ಸಭೆಯಲ್ಲಿ ಮಂಡಿಸಿದೆ.

ತೀರ್ಮಾನ:

ಸದರಿ ವಿಷಯವನ್ನು ಸಭೆಯು ಕೂಲಂಕುಷವಾಗಿ ಚರ್ಚಿಸಿ ಸಂಸ್ಥೆಯ ರೋಗ ಲಕ್ಷಣ ಶಾಸ್ತ್ರ ವಿಭಾಗಕ್ಕೆ ಅಗತ್ಯವಿರುವ **Tissue Embedding Station with Cold Plate(01), Automated Rotary Microtome –(01), Binocular Students Microscope (20)** ಉಪಕರಣಗಳನ್ನು ಅಂದಾಜು ರೂ.35.00 ಲಕ್ಷಗಳ ಮೊತ್ತದಲ್ಲಿ ಕೆ.ಟಿ.ಪಿ.ಪಿ. ಅಧಿನಿಯಮಾನುಸಾರ ಇ–ಟೆಂಡರ್ ಮಾಡಿ ಖರೀದಿಸಲು ತೀರ್ಮಾನಿಸಲಾಯಿತು. ಮತ್ತು ಸದರಿ ವೆಚ್ಚವನ್ನು ಸಂಸ್ಥೆಯ ಲೆಕ್ಕ ಶೀರ್ಷಿಕೆ 2210(103)ರಡಿಯ ಅನುದಾನದಿಂದ ಭರಿಸಲು ಅನುಮೋದನೆ ನೀಡಿತು.

Finance Officer
Hassan Institute of Medical Sciences
HASSAN - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

# ಅಜೆಂಡಾ ಕ್ರಮ ಸಂಖ್ಯೆ: 14

ವಿಷಯ: ಸಂಸ್ಥೆಯ ಕಾಲೇಜು, ಬೋಧಕ ಆಸ್ಪತ್ರೆ ಕ್ಯಾಂಪಸ್‌ಗಳ ಒಳ ಮತ್ತು ಹೊರ ಆವರಣಗಳ ಸುತ್ತ ಮುತ್ತಲಿನ ಉದ್ಯಾನವನಗಳನ್ನು ನಿರ್ವಹಣೆ ಮಾಡಲು ಇ-ಟೆಂಡರ್ ಕರೆಯುವ ಬಗ್ಗೆ.

**ಪ್ರಸ್ತಾವನೆ:**

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕಾಲೇಜು ಹಾಗೂ ಬೋಧಕ ಆಸ್ಪತ್ರೆಯ ಮುಂಭಾಗದಲ್ಲಿರುವ ಉದ್ಯಾನವನಗಳು ಮತ್ತು ಆವರಣಗಳ ಸುತ್ತಲು ಇರುವ ಉದ್ಯಾನವನಗಳ ನಿರ್ವಹಣೆ ಮಾಡಲು ಅಂದಾಜು ವೆಚ್ಚ ರೂ.8.40 ಲಕ್ಷಗಳಲ್ಲಿ ಕರೆಯಲಾದ ಟೆಂಡರ್ ಅವಧಿಯು ಪ್ರಸ್ತುತ ಚಾಲ್ತಿಯಲ್ಲಿದ್ದು, ಫೆಬ್ರವರಿ-2023 ಕ್ಕೆ ಮುಕ್ತಾಯವಾಗುತ್ತದೆ.

ಸಂಸ್ಥೆಯ ಕಾಲೇಜು, ಬೋಧಕ ಆಸ್ಪತ್ರೆ ಕ್ಯಾಂಪಸ್‌ಗಳ ಒಳ ಮತ್ತು ಹೊರ ಆವರಣದ ಸುತ್ತ ಮುತ್ತಲಿನ ಉದ್ಯಾನವನಗಳನ್ನು ನಿರ್ವಹಣೆ ಮಾಡಲು ಅಂದಾಜು ವೆಚ್ಚ ರೂ.12.00 ಲಕ್ಷಗಳಾಗಿದ್ದು, ಸದರಿ ವೆಚ್ಚವನ್ನು ಬೋಧಕ ಆಸ್ಪತ್ರೆಯ ಯೂಸರ್ಸ್ ನಿಧಿಯಿಂದ ಭರಿಸಲು ಹಾಗೂ ಈ ಎಲ್ಲಾ ಉದ್ಯಾನವನಗಳನ್ನು ನಿರ್ವಹಣೆ ಮಾಡುವ ಸಂಬಂಧ ಇ-ಟೆಂಡರ್ ಕರೆಯುವ ಸಲುವಾಗಿ ವಿಷಯವನ್ನು ಚರ್ಚಿಸಿ ಅನುಮೋದನೆ ಪಡೆಯಲು ಆರ್ಥಿಕ ಸಮಿತಿ ಸಭೆಯಲ್ಲಿ ವಿಷಯವನ್ನು ಮಂಡಿಸಲಾಯಿತು.

| ಕ್ರಮ ಸಂಖ್ಯೆ | ವಿವರ | ಮೊತ್ತ (ರೂಗಳಲ್ಲಿ) |
|---|---|---|
| 1 | 5 ಜನ ಗಾರ್ಡನರ್‌ಗಳ ವೇತನ ರೂ 14,987x5 ಜೊತೆಗೆ ಸೇವಾಶುಲ್ಕ ಸೇರಿ | 9,00,000.00 |
| 2 | 2022-23ನೇ ಸಾಲಿನ ಉದ್ಯಾನವನಗಳ ಮಾಸಿಕ ರೂ.20,000 ದಂತೆ ನಿರ್ವಹಣೆ ವೆಚ್ಚ | 3,00,000.00 |
| | ಒಟ್ಟು ವೆಚ್ಚ | 12,00,000.00 |

**ತೀರ್ಮಾನ:**

ಸದರಿ ವಿಷಯವನ್ನು ಸಭೆಯು ಕೂಲಂಕುಷವಾಗಿ ಚರ್ಚಿಸಿ ಸಂಸ್ಥೆಯ ಕಾಲೇಜು, ಬೋಧಕ ಆಸ್ಪತ್ರೆ ಕ್ಯಾಂಪಸ್‌ಗಳ ಒಳ ಮತ್ತು ಹೊರ ಆವರಣದ ಸುತ್ತ ಮುತ್ತಲಿನ ಉದ್ಯಾನವನಗಳನ್ನು ನಿರ್ವಹಣೆ ಮಾಡಲು ಅಂದಾಜು ವೆಚ್ಚ ರೂ.12.00 ಲಕ್ಷಗಳಲ್ಲಿ 2023-24ನೇ ಸಾಲಿಗೆ ನಿರ್ವಹಣೆ ಮಾಡಲು, ಕೆ.ಟಿ.ಪಿ.ಪಿ. ಅಧಿನಿಯಮಾನುಸಾರ ಇ-ಟೆಂಡರ್ ಮಾಡಿ, ಹೊರ ಸಂಪನ್ಮೂಲ ಏಜೆನ್ಸಿಯನ್ನು ನಿಗದಿ ಮಾಡಲು ತೀರ್ಮಾನಿಸಲಾಯಿತು. ಮತ್ತು ಸದರಿ ವೆಚ್ಚವನ್ನು ಸಂಸ್ಥೆಯ ಯೂಸರ್ಸ್ ನಿಧಿಯಿಂದ ಭರಿಸಲು ಅನುಮೋದನೆ ನೀಡಿತು.

Finance Officer
Hassan Institute of Medical Sciences
HASSAN - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

# ಅಜೆಂಡಾ ಕ್ರಮ ಸಂಖ್ಯೆ.:15

ವಿಷಯ: ಚಾಲ್ತಿಯಿರುವ ಲಿಕ್ವಿಡ್ ಆಕ್ಸಿಜನ್‌ಅನ್ನು ಟರ್ನ್ ಕೀ ಪ್ರಾಜೆಕ್ಟ್‌ನ್ನು ಮುಂದುವರೆಸುವ ಬಗ್ಗೆ.

*-*-*

ಸಂಸ್ಥೆಯ ಮುಖ್ಯ ಶಸ್ತ್ರಚಿಕಿತ್ಸಾಗಾರ ಮತ್ತು ತೀವ್ರ ನಿಗಾ ಘಟಕಕ್ಕೆ ಆಕ್ಸಿಜನ್ ನಿರ್ವಹಣೆಗೆ ಲಿಕ್ವಿಡ್ ಆಕ್ಸಿಜನ್ ಪ್ಲಾಂಟ್‌ನ ಅವಶ್ಯಕತೆಯಿರುತ್ತದೆ. ಸದರಿ ಲಿಕ್ವಿಡ್ ಆಕ್ಸಿಜನ್ ಪ್ಲಾಂಟ್‌ನ್ನು ಅಳವಡಿಸಿರುವುದರಿಂದ ಆಕ್ಸಿಜನ್ ನಿರ್ವಹಣಾ ವೆಚ್ಚವು ತುಂಬಾ ಕಡಿಮೆಯಾಗುತ್ತದೆ. ಪ್ರಸ್ತುತ 13 ಕೆ.ಎಲ್. ಸಾಮರ್ಥ್ಯದ LMO ಟ್ಯಾಂಕ್ ಮೂಲಕ ಲಿಕ್ವಿಡ್ ಆಕ್ಸಿಜನ್‌ನನ್ನು 2019-20ನೇ ಸಾಲಿನಿಂದ Pre-Covid ಸಮಯದಲ್ಲಿ ರೂ.32,36,521.00ಗಳು, 2020-21ನೇ ಸಾಲಿನಲ್ಲಿ ಕೋವಿಡ್ ಮೊದಲನೇ ಅಲೆಯಲ್ಲಿ ರೂ.1,03,03,850.00 ಮತ್ತು 2021-22ರಲ್ಲಿ ಕೋವಿಡ್ 2ನೇ ಅಲೆಯಲ್ಲಿ ರೂ.1,81,22,927.00 ವೆಚ್ಚವಾಗಿರುತ್ತದೆ.

ಸದರಿ ಎಲ್.ಎಮ್.ಓ. ಟ್ಯಾಂಕ್ ಸರಬರಾಜು ವ್ಯವಸ್ಥೆಯನ್ನು 2016-17ನೇ ಸಾಲಿನಲ್ಲಿ 5 ವರ್ಷದ ಅವಧಿಗೆ 13 **KL LMO** ಟ್ಯಾಂಕನ್ನು ಟರ್ನ್ ಕೀ ಪ್ರಾಜೆಕ್ಟ್ ಮೂಲಕ ಇ-ಟೆಂಡರ್ ಆಹ್ವಾನಿಸಿ, ಮೆ.Praxir India Pvt. Ltd., ಬೆಂಗಳೂರು ಇವರಿಂದ 5 ವರ್ಷದ ಅವಧಿಗೆ ಆಕ್ಸಿಜನ್‌ನನ್ನು ಪ್ರಾರಂಭದ ದರ ರೂ.16.25/cu.mt ಪ್ರತಿ ವರ್ಷಕ್ಕೆ 5% ಹೆಚ್ಚಾದಂತೆ, ಪ್ರಸ್ತುತ ರೂ.18.81/cu.mtಗಳಲ್ಲಿ ಸರಬರಾಜು ಪಡೆಯಲಾಗುತ್ತಿದ್ದು, ಸದರಿ ಟೆಂಡರ್ ಅವಧಿಯು ಮೇ-2023ಕ್ಕೆ ಮುಕ್ತಾಯಗೊಳ್ಳಲಿದೆ.

ಪ್ರಸ್ತುತ ಆಸ್ಪತ್ರೆ ನಿರ್ವಹಣೆಗೆ ವಾರ್ಷಿಕವಾಗಿ ಅಂದಾಜು 4,00,000 cu.mt ಆಕ್ಸಿಜನ್ ಅವಶ್ಯಕತೆ ಇದ್ದು, ಸದರಿ ಲಿಕ್ವಿಡ್ ಆಕ್ಸಿಜನ್ ಪ್ಲಾಂಟ್‌ನ್ನು ಟರ್ನ್ ಕೀ ಪ್ರಾಜೆಕ್ಟ್ ಮೂಲಕ ಮುಂದಿನ 05 ವರ್ಷಗಳ ಅವಧಿಗೆ ಕೆ.ಟಿ.ಪಿ.ಪಿ ನಿಯಮಾವಳಿಯನ್ವಯ, ಪ್ರಸ್ತುತ ಸರಬರಾಜು ಮಾಡುತ್ತಿರುವ ಮೆ.Praxir India Pvt. Ltd., ಬೆಂಗಳೂರು ಇವರಿಂದ ಮುಂದಿನ 5 ವರ್ಷದ ಅವಧಿಗೆ ಸರಬರಾಜು ಪಡೆಯಲು ಅನುಮೋದನೆಗೆ ಅಥವಾ ಮುಂದಿನ 5 ವರ್ಷಗಳ ಅವಧಿಗೆ 13 ಕೆ.ಎಲ್. ಎಲ್.ಎಮ್.ಓ.ನ್ನು ಟರ್ನ್ ಕೀ ಪ್ರಾಜೆಕ್ಟ್ ಮೂಲಕ ಲಿಕ್ವಿಡ್ ಆಕ್ಸಿಜನ್‌ನ್ನು ಸರಬರಾಜು ಪಡೆಯಲು ಇ-ಟೆಂಡರ್ ಆಹ್ವಾನಿಸಲು ವಿಷಯವನ್ನು ಆರ್ಥಿಕ ಸಮಿತಿಯ ಮುಂದೆ ಮಂಡಿಸಿದೆ.

**ತೀರ್ಮಾನ:**

ಸದರಿ ವಿಷಯವನ್ನು ಸಭೆಯು ಕೂಲಂಕುಷವಾಗಿ ಚರ್ಚಿಸಿ ಸಂಸ್ಥೆಗೆ **20 KL** ಸಾಮರ್ಥ್ಯದ ಇನ್ನೊಂದು **LMO TANK**ನ್ನು ಹೆಚ್ಚುವರಿಯಾಗಿ ಖರೀದಿಸಲಾಗುತ್ತಿದ್ದು, ಈಗಾಗಲೇ 3ನೇ ಬಾರಿ ಟೆಂಡರ್ ಕರೆಯಲಾಗಿದ್ದು, ಏಕೈಕ ಬಿಡ್‌ದಾರರಾಗಿರುವ **M/s. Myavani Infratech, Gadag**ರವರು ಪ್ರಿಂಟಿಂಗ್ ದೋಷದಿಂದ ಕೆ.ಟಿ.ಪಿ.ಪಿ ಪೋರ್ಟಲ್‌ನಲ್ಲಿ **ರೂ.99.00**ಲಕ್ಷ ದರವನ್ನು ನಮೂದಿಸುವ ಬದಲಾಗಿ. **ರೂ.9.00** ಲಕ್ಷ ದರವನ್ನು ಘೋಷಿಸಿಕೊಂಡಿರುವುದನ್ನು ಸಭೆಯ ಗಮನಕ್ಕೆ ತಂದಾಗ ಈ ಬಗ್ಗೆ ಮರು ಟೆಂಡರ್ ಕರೆಯುವಂತೆ ಹಾಗೂ ಪ್ರಸ್ತುತ ಒಪ್ಪಂದದಲ್ಲಿರುವ **ಮೆ.Praxir India Pvt. Ltd.,** ಬೆಂಗಳೂರುರವರ ಜೊತೆ **13 KL LMO TANK** ಬಗ್ಗೆ ಮುಂದಿನ ಸಭೆಯಲ್ಲಿ ಚರ್ಚಿಸಲು ತೀರ್ಮಾನಿಸಲಾಯಿತು.

Finance Officer
Hassan Institute of Medical Sciences
HASSAN - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

# ಅಜೆಂಡಾ ಕ್ರಮ ಸಂಖ್ಯೆ: 16

ವಿಷಯ: ಹಿಮ್ಸ್ ಸಂಸ್ಥೆಯ ಆವರಣದಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡದಲ್ಲಿ ಹೆಚ್ಚುವರಿಯಾಗಿ 2 ಮತ್ತು 3ನೇ ಅಂತಸ್ತುಗಳ ಕಟ್ಟಡ ನಿರ್ಮಾಣ ಕಾಮಗಾರಿಯ ಅಂದಾಜು ಮೊತ್ತ ರೂ.5000.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿ, ಅನುದಾನ ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ ಆಕುಕ 275 ಕೆವಿಎಂ 2018, ದಿನಾಂಕ:11.10.2018

2. ಕಾರ್ಯಪಾಲಕ ಅಭಿಯಂತರರು,ಲೋಕೋಪಯೋಗಿ ಇಲಾಖೆ, ಹಾಸನ ಇವರ ಪತ್ರ ಸಂಖ್ಯೆ:ಕಾ.ಇಂ:ಲೋ.ಇ:ಹಾ.ವಿ:ಹಾಸನ:ಸ.ಇಂ.4:2021-22, ದಿನಾಂಕ:26.10.2021.

3. ಸರ್ಕಾರದ ಪತ್ರ ಸಂಖ್ಯೆ: ಎಂ.ಇ.ಡಿ./267/ಕೆಯುಎಂ/2021, ಬೆಂಗಳೂರು, ದಿನಾಂಕ:14.06.2022.

*-*-*

ಹಿಮ್ಸ್ ಸಂಸ್ಥೆಯ ಆವರಣದಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡ ನಿರ್ಮಾಣಕ್ಕಾಗಿ 2018-19ನೇ ಸಾಲಿನ ಆಯವ್ಯಯದ ಘೋಷಣೆ ಅನ್ವಯ ಸದರಿ ಕಟ್ಟಡದಲ್ಲಿ ನ್ಯೂರಾಲಜಿ, ನ್ಯೂರೋ ಸರ್ಜರಿ, ಮೆಡಿಕಲ್ ಗ್ಯಾಸ್ಟ್ರೋ ಎಂಟ್ರಾಲಜಿ, ಸರ್ಜಿಕಲ್ ಗ್ಯಾಸ್ಟ್ರೋ ಎಂಟ್ರಾಲಜಿ, ಪೀಡಿಯಾಟ್ರಿಕ್ ಸರ್ಜರಿ, ನೆಫ್ರಾಲಜಿ, ಯುರಾಲಜಿ, ಕಾರ್ಡಿಯೋ ಥೋರಾಸಿಕ್ ಸರ್ಜರಿ, ಕಾರ್ಡಿಯಾಲಜಿ, ಪ್ಲಾಸ್ಟಿಕ್ ಸರ್ಜರಿ, ಎಂಡೋಕ್ರೈನಾಲಜಿ ವಿಭಾಗಗಳನ್ನೊಳಗೊಂಡಂತೆ ಒಟ್ಟು 11 ವಿಭಾಗಗಳನ್ನು ಒಳಗೊಂಡ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡ ನಿರ್ಮಿಸಲು ಅನುಮೋದನೆ ನೀಡಲಾಗಿರುತ್ತದೆ.

2018-19ನೇ ಸಾಲಿನ ಅಯವ್ಯಯದಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡ ನಿರ್ಮಾಣಕ್ಕಾಗಿ ರೂ.5000.00 ಲಕ್ಷಗಳಿಗೆ ಉಲ್ಲೇಖಿತ ಪತ್ರ (1)ರಲ್ಲಿ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಸದರಿ ಅನುದಾನದಲ್ಲಿ ನೆಲ ಮತ್ತು ಮೊದಲನೆ ಅಂತಸ್ತುಗಳ ಕಟ್ಟಡ ಕಾಮಗಾರಿಗಳು ಈಗಾಗಲೇ ಪ್ರಗತಿಯಲ್ಲಿರುತ್ತದೆ.

ಮುಂದುವರಿದು ಸದರಿ ಕಟ್ಟಡದ ಮುಖ್ಯ ವಾಸ್ತು ಶಿಲ್ಪಿಗಳು,ಕರ್ನಾಟಕ ಸರ್ಕಾರ, ಬೆಂಗಳೂರು ರವರಿಂದ ಅನುಮೋದಿತ ವಾಸ್ತು ಶಿಲ್ಪಿ ನಕ್ಷೆ ಸಂಖ್ಯೆ:14552/1-2/L/R ರಂತೆ ಸದರಿ ಕಟ್ಟಡವು ನೆಲ ಮತ್ತು ಮೂರು ಅಂತಸ್ತುಗಳನ್ನು ಒಳಗೊಂಡಿರುತ್ತದೆ. ಹಾಗೂ ಜಿಲ್ಲೆಯ ಮತ್ತು ಹೊರ ಜಿಲ್ಲೆಯ ಬಡರೋಗಿಗಳಿಗೆ ಹೆಚ್ಚಿನ ಚಿಕಿತ್ಸೆಯನ್ನು ನೀಡಲು ಅನುಕೂಲವಾಗುವಂತೆ ಮತ್ತು ಈ ಸಂಸ್ಥೆಗೆ 2021-22ನೇ ಸಾಲಿನ ಬಜೆಟ್ ಘೋಷಣೆಯನ್ವಯ ಪ್ರಸಕ್ತ ಸಾಲಿನಿಂದ 100 ಸ್ನಾತಕೋತ್ತರ ಸೀಟುಗಳ ಹೆಚ್ಚಳಕ್ಕೆ ರಾಷ್ಟ್ರೀಯ ವೈದ್ಯಕೀಯ ಮಂಡಳಿಯ ನಿಯಮಾನುಸಾರ

Finance Officer
Hassan Institute of Medical Sciences
HASSAN - 573 201



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

ಹಾಗೂ ಉಲ್ಲೇಖ (1) ರಲ್ಲಿ ಸರ್ಕಾರದಿಂದ ಅನುಮತಿ ನೀಡಲಾಗಿದ್ದು, ಅವಶ್ಯಕವಿರುವ ಎಲ್ಲಾ ವಿಭಾಗಗಳನ್ನು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡದಲ್ಲಿ ಪ್ರಾರಂಭಿಸಲು 2ನೇ ಮತ್ತು 3ನೇ ಅಂತಸ್ತಿನ ಕಟ್ಟಡ ನಿರ್ಮಾಣ, ಆವರಣದ ರಸ್ತೆ ಅಭಿವೃದ್ಧಿ ಪಡಿಸಲು ಹಾಗೂ ಕಾಂಪೌಂಡ್ ಮತ್ತು ವಿದ್ಯುದೀಕರಣ ಕಾಮಗಾರಿಗಳು ಹಾಗೂ 8 ಸಂಖ್ಯೆ ಬೆಡ್‌ಲಿಫ್ಟ್ ಅಳವಡಿಸುವುದು ಇತ್ಯಾದಿ ಕಾಮಗಾರಿಗಳನ್ನು ಕೈಗೊಳ್ಳಲು ಕಾಮಗಾರಿಯ ಅಂದಾಜು ಮೊತ್ತ ರೂ.5000.00ಲಕ್ಷಗಳಿಗೆ ಲೋಕೋಪಯೋಗಿ ಇಲಾಖೆ, ಹಾಸನ ಇವರು ಅಂದಾಜು ಪಟ್ಟಿ ಸಲ್ಲಿಸಿದ್ದು, ಸದರಿ ಅಂದಾಜು ಪಟ್ಟಿಗೆ ಸೂಕ್ತ ಅನುದಾನದೊಂದಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಉಲ್ಲೇಖಿತ ಪತ್ರ (2)ರಲ್ಲಿ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಹಾಸನರವರು ಕೋರಿರುತ್ತಾರೆ.

ಆದುದರಿಂದ ಹಿಮ್ಸ್ ಸಂಸ್ಥೆಯ ಆವರಣದಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡದಲ್ಲಿ ಹೆಚ್ಚುವರಿಯಾಗಿ 2 ಮತ್ತು 3ನೇ ಅಂತಸ್ತುಗಳ ಕಟ್ಟಡ ನಿರ್ಮಾಣ, ಆವರಣದ ರಸ್ತೆ, ಕಾಂಪೌಂಡ್ ಮತ್ತು ವಿದ್ಯುದ್ಧೀಕರಣ ಹಾಗೂ 8 ಸಂಖ್ಯೆ ಬೆಡ್‌ಲಿಫ್ಟ್ ಅಳವಡಿಸುವುದು ಇತ್ಯಾದಿ ಕಾಮಗಾರಿಗಳನ್ನು ಕೈಗೊಳ್ಳುವ ಕಾಮಗಾರಿಯ ಅಂದಾಜು ಮೊತ್ತ ರೂ.5000.00ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆಯೊಂದಿಗೆ ಅಗತ್ಯ ಅನುದಾನ ಬಿಡುಗಡೆ ಮಾಡವಂತೆ ಸರ್ಕಾರಕ್ಕೆ ದಿನಾಂಕ: 11.11.2021ರಂದು ಪ್ರಸ್ತಾವನೆ ಸಲ್ಲಿಸಿಸಲಾಗಿತ್ತು.

ಸದರಿ ಕಾಮಗಾರಿಯ ಪ್ರಸ್ತಾವನೆಯನ್ನು ಸಂಸ್ಥೆಯ ಆರ್ಥಿಕ ಸಮಿತಿ ಸಭೆಯಲ್ಲಿ ಮಂಡಿಸಿ, ಸಭೆಯ ತೀರ್ಮಾನದನ್ವಯ ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಉಲ್ಲೇಖಿತ ಪತ್ರ (3) ರಲ್ಲಿ ಸರ್ಕಾರದಿಂದ ನಿರ್ದೇಶಿಸಿರುವುದರಿಂದ ಈ ವಿಷಯದ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲು ವಿಷಯವನ್ನು ಆರ್ಥಿಕ ಸಮಿತಿ ಸಭೆಯಲ್ಲಿ ಮಂಡಿಸಿದೆ.

**ತೀರ್ಮಾನ:**

**ಹಿಮ್ಸ್ ಸಂಸ್ಥೆಯ ಗಂಧದ ಕೋಠಿ ಆವರಣದಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಕಟ್ಟಡದಲ್ಲಿ ಹೆಚ್ಚುವರಿಯಾಗಿ 2 ಮತ್ತು 3ನೇ ಅಂತಸ್ತಿನ ಕಟ್ಟಡ ಕಾಮಗಾರಿ ಕೈಗೊಳ್ಳುವ ಸಂಸ್ಥೆಯ ಪ್ರಸ್ತಾವನೆಯನ್ನು ಸಭೆಯು ಕೂಲಂಕಷವಾಗಿ ಚರ್ಚಿಸಿತು. ಸದರಿ ಕಟ್ಟಡದ ಮೊದಲನೇ ಹಂತದ ಕಾಮಗಾರಿಗಳಾದ ನೆಲ ಮತ್ತು ಮೊದಲನೇ ಮಹಡಿ ಕಟ್ಟಡ ನಿರ್ಮಾಣ ಕಾಮಗಾರಿಗಳು ಸರ್ಕಾರದ ಅನುಮೋದನೆಯಂತೆ ಅಂದಾಜು ಮೊತ್ತ ರೂ.54.00 ಕೋಟಿಗಳ ಮೊತ್ತದಲ್ಲಿ ಈಗಾಗಲೇ ನಿರ್ಮಾಣ ಕಾಮಗಾರಿ ಮುಗಿಯುವ ಹಂತದಲ್ಲಿರುವುದನ್ನು ಚರ್ಚಿಸಿತು. ಸರ್ಕಾರವು 2018-19ನೇ ಸಾಲಿನಲ್ಲಿಯೇ ಲೋಕೋಪಯೋಗಿ ಇಲಾಖೆಯು ಸಲ್ಲಿಸಿದ್ದ 4 ಅಂತಸ್ತಿನ 11 ವಿಭಾಗಗಳನ್ನು ಒಳಗೊಂಡ**

Finance Officer
Hassan Institute of Medical Sciences
HASSAN - 573 201



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣ ಪ್ರಸ್ತಾವನೆಗೆ ಈಗಾಗಲೇ ಅನುಮೋದನೆ ನೀಡಿರುತ್ತದೆ. ಮತ್ತು ಸಂಸ್ಥೆಯು ಸದರಿ 11 ವಿಭಾಗಗಳಿಗೆ ಅವಶ್ಯಕ ಬೋಧಕ ಸಿಬ್ಬಂದಿಯನ್ನು ಸೃಜಿಸಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಈಗಾಗಲೇ ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿರುವುದನ್ನು ಸಭೆಯು ಗಮನಿಸಿತು. ಅನುಮೋದಿತ 11 ವಿಭಾಗಗಳು ಕಾರ್ಯಾರಂಭ ಮಾಡಲು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಮೂಲ ಸೌಕರ್ಯಕ್ಕಾಗಿ 2 ಮತ್ತು 3ನೇ ಅಂತಸ್ತುಗಳ ಕಟ್ಟಡ ನಿರ್ಮಾಣ ಕಾಮಗಾರಿ ಅತ್ಯವಶ್ಯಕವಾಗಿದ್ದು, ಈ ಸಂಬಂಧ ಸಂಸ್ಥೆಯು ಈಗಾಗಲೇ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಕಟ್ಟಡದಲ್ಲಿ 2ನೇ ಮತ್ತು 3ನೇ ಅಂತಸ್ತು ಕಟ್ಟಡ ನಿರ್ಮಾಣ, ಆವರಣದ ರಸ್ತೆ, ಕಾಂಪೌಂಡ್ ಮತ್ತು ವಿದ್ಯುತೀಕರಣ, 8 ಸಂಖ್ಯೆಯ ಬೆಡ್‌ಲಿಫ್ಟ್ ಅಳವಡಿಸುವುದು ಇತ್ಯಾದಿ ಕಾಮಗಾರಿಗಳನ್ನು ಅಂದಾಜು ರೂ.5000.00 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆಯೊಂದಿಗೆ ಅಗತ್ಯ ಅನುದಾನ ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ 11–11–2021ರಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಸರ್ಕಾರದಿಂದ ಸದರಿ ಕಾಮಗಾರಿಯ ಪ್ರಸ್ತಾವನೆಯುನ್ನು ಆರ್ಥಿಕ ಸಮಿತಿ ಸಭೆಯಲ್ಲಿ ಮಂಡಿಸಿ, ಸಭೆಯ ತೀರ್ಮಾನದನ್ವಯ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಉಲ್ಲೇಖಿತ ಪತ್ರ(3)ರಲ್ಲಿ ಸರ್ಕಾರದಿಂದ ನಿರ್ದೇಶನವಿರುತ್ತದೆ. ಆದುದರಿಂದ ಲೋಕೋಪಯೋಗಿ ಇಲಾಖೆಯಿಂದ ಸಲ್ಲಿಸಿರುವ ರೂ.5000.00 ಲಕ್ಷಗಳ ಅಂದಾಜು ಪಟ್ಟಿಯನ್ನು ಪರಿಶೀಲಿಸಿ, ಸದರಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ 2ನೇ ಹಂತದ ಕಾಮಗಾರಿಯನ್ನು ಕೈಗೊಳ್ಳಲು ಅನುಮೋದಿಸಿತು ಮತ್ತು ರೂ.5000.00ಲಕ್ಷಗಳ ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಅನುದಾನ ಬಿಡುಗಡೆ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಒಪ್ಪಿಗೆ ನೀಡಿತು.

Finance Officer
Hassan Institute of Medical Sciences

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

# ಅಜೆಂಡಾ ಕ್ರಮ ಸಂಖ್ಯೆ : 17

**ವಿಷಯ : ಹಿಮ್ಸ್ ಸಂಸ್ಥೆಯ ಆವರಣದಲ್ಲಿರುವ ಘನತ್ಯಾಜ್ಯ ನೀರು ಶುದ್ಧೀಕರಣ ಘಟಕಕ್ಕೆ ಮತ್ತು ಬಯೋಮೆಡಿಕಲ್ ತ್ಯಾಜ್ಯ ವಿಲೇವಾರಿ ಕೊಠಡಿಯ ಸುತ್ತ ಕಾಂಕ್ರೀಟ್‌ರಸ್ತೆ ಹಾಗೂ ಚರಂಡಿ ನಿರ್ಮಿಸುವ ಬಗ್ಗೆ.**

ಉಲ್ಲೇಖ: 1) ವೈದ್ಯಕೀಯ ಅಧೀಕ್ಷಕರು, ಬೋಧಕ ಆಸ್ಪತ್ರೆ, ಹಿಮ್ಸ್, ಇವರ ಪತ್ರ ದಿನಾಂಕ:17.06.2022.

2) ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ಉಪ-ವಿಭಾಗ ಹಾಸನರವರ ಅಂದಾಜು ಪಟ್ಟಿ ಪತ್ರ ದಿನಾಂಕ: 20-09-2022

*-*-*

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿರುವ ಘನತ್ಯಾಜ್ಯ ನೀರು ಶುದ್ಧೀಕರಣ ಘಟಕಕ್ಕೆ ಮತ್ತು ಬಯೋಮೆಡಿಕಲ್ ತ್ಯಾಜ್ಯ ವಿಲೇವಾರಿ ಕೊಠಡಿಯ ಸುತ್ತ ಕಾಂಕ್ರೀಟ್ ರಸ್ತೆ ಹಾಗೂ ಒಳ ಚರಂಡಿ ವ್ಯವಸ್ಥೆ ಇಲ್ಲದೆ ಇರುವುದರಿಂದ ಮಳೆಗಾಲದ ಸಮಯದಲ್ಲಿ ಘನತ್ಯಾಜ್ಯ ನೀರು ಶುದ್ಧೀಕರಣ ಘಟಕಕ್ಕೆ ತೆರಳಲು ಮತ್ತು ಬಯೋಮೆಡಿಕಲ್ ತ್ಯಾಜ್ಯ ವಿಲೇವಾರಿಯ ವಾಹನಗಳನ್ನು ಚಾಲನೆ ಮಾಡಲು ತುಂಬಾ ಕಷ್ಟಕರವಾಗಿರುತ್ತದೆ. ಆದುದರಿಂದ ಸದರಿ ಘಟಕದ ಸುತ್ತ ರಸ್ತೆ ಮತ್ತು ಒಳಚರಂಡಿ ಮಾಡಿಸಿ ಕೊಡುವಂತೆ ಉಲ್ಲೇಖಿತ ಪತ್ರ(1)ರಲ್ಲಿ ಮನವಿ ಸಲ್ಲಿಸಿರುತ್ತಾರೆ.

ಮುಂದುವರೆದು ಸದರಿ ಘಟಕಕ್ಕೆ ಕಾಂಕ್ರೀಟ್ ರಸ್ತೆ ಮತ್ತು ಒಳಚರಂಡಿ ನಿರ್ಮಿಸಲು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಉಪ-ವಿಭಾಗ, ಹಾಸನರವರು ಲೋಕೋಪಯೋಗಿ ಇಲಾಖೆಯ 2021-22ನೇ ಸಾಲಿನ ಎಸ್.ಆರ್. ದರದಂತೆ ಉಲ್ಲೇಖ ಪತ್ರ(2)ರಲ್ಲಿ ಈ ಕೆಳಕಂಡಂತೆ ಸವಿವರ ಅಂದಾಜು ಪಟ್ಟಿ ಸಲ್ಲಿಸಿರುತ್ತಾರೆ ವಿವರ ಈ ಕೆಳಕಂಡಂತಿರುತ್ತದೆ.

| ಕ್ರಮ ಸಂಖ್ಯೆ | ವಿವರ | ಅಳತೆ(ಮೀಟರ್) | ಅಂದಾಜು ಮೊತ್ತ |
|---|---|---|---|
| 01 | ಕಾಂಕ್ರೀಟ್‌ರಸ್ತೆ, Embankment, wetmix, m30 concrete<br>1.ಆಸ್ಪತ್ರೆಯಿಂದ ಎಸ್.ಟಿ.ಪಿ.ಘಟಕಕ್ಕೆ<br>2.ಎಸ್.ಟಿ.ಪಿ.ಘಟಕದಿಂದ ಹೈಸ್ಕೂಲ್ ಮೈದಾನಕ್ಕೆ<br>3.ಎಸ್.ಟಿ.ಪಿ.ಘಟಕದಿಂದ ಬಯೋಮೆಡಿಕಲ್ ಕೊಠಡಿಯ | 35x4<br>50x5<br>15x9 | 7,63,266.00 |
| 02 | Detailed estimate for one side drain 1.5feet cc drain<br>Deck culvert<br>Deck slab 1.2m<br>Steel in tone | 70x0.45<br>4x5.5<br>4x5.5<br>2.69 | 5,17,842.00 |
| | GST 18% | | 230599.44 |
| | Misc. Unforeseen and Tender Primen | | 68292.56 |
| | **Grand Total** | | **15,80,000.00** |



Finance Officer
Hassan Institute of Medical Sciences
HASSAN - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

ಸದರಿ ಕಾಮಗಾರಿಗಳನ್ನು ಕೈಗೊಳ್ಳುವುದರಿಂದ ಮಳೆಗಾಲದ ಸಮಯದಲ್ಲಿ ಘನತ್ಯಾಜ್ಯ ನೀರು ಶುದ್ಧೀಕರಣ ಘಟಕಕ್ಕೆ ತೆರಳಲು ಮತ್ತು ಬಯೋಮೆಡಿಕಲ್ ತ್ಯಾಜ್ಯ ವಿಲೇವಾರಿಯ ವಾಹನಗಳನ್ನು ಚಾಲನೆ ಮಾಡಲು ಹೆಚ್ಚಿನ ಅನುಕೂಲವಾಗುತ್ತದೆ. ಆದುದರಿಂದ ಸದರಿ ಕಾಮಗಾರಿಯನ್ನು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಉಪ-ವಿಭಾಗ, ಹಾಸನರವರಿಂದ ಕೈಗೊಳ್ಳುವುದರ ಬಗ್ಗೆ ಹಾಗೂ ಸದರಿ ವೆಚ್ಚವನ್ನು ಯೂಸರ್ಸ್ ನಿಧಿಯಿಂದ ಭರಿಸುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲು ವಿಷಯವನ್ನು ಆರ್ಥಿಕ ಸಮಿತಿ ಸಭೆಯಲ್ಲಿ ಮಂಡಿಸಿದೆ.

**ತೀರ್ಮಾನ:**

ಹಿಮ್ಸ್ ಸಂಸ್ಥೆಯ ಆವರಣದಲ್ಲಿರುವ ಘನತ್ಯಾಜ್ಯ ನೀರು ಶುದ್ಧೀಕರಣ ಘಟಕಕ್ಕೆ ಮತ್ತು ಬಯೋಮೆಡಿಕಲ್ ತ್ಯಾಜ್ಯ ವಿಲೇವಾರಿ ಕೊಠಡಿಯ ಸುತ್ತ ಕಾಂಕ್ರೀಟ್‌ರಸ್ತೆ ಹಾಗೂ ಚರಂಡಿ ನಿರ್ಮಿಸುವ ಕಾಮಗಾರಿ ಪ್ರಸ್ತಾವನೆ ಬಗ್ಗೆ ಸಭೆಯು ಕೂಲಂಕ್ಷವಾಗಿ ಚರ್ಚಿಸಿತು. ಸದರಿ ಕಾಮಗಾರಿಯು ಅತ್ಯವಶ್ಯಕವಾಗಿರುವುದರಿಂದ ರೂ. 15.80 ಲಕ್ಷಗಳ ಮೊತ್ತದಲ್ಲಿ ಕಾಮಗಾರಿಯನ್ನು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಉಪ ವಿಭಾಗ, ಹಾಸನ ಇವರಿಂದ ಕೈಗೊಳ್ಳಲು ಅನುಮೋದನೆ ನೀಡಿತು. ಮತ್ತು ಸದರಿ ವೆಚ್ಚವನ್ನು ಸಂಸ್ಥೆಯ ಯೂಸರ್ಸ್ ನಿಧಿಯಿಂದ ಭರಿಸಲು ಅನುಮೋದಿಸಿತು.

Finance Officer
Hassan Institute of Medical Sciences
HASSAN - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

# ಅಜೆಂಡಾ ಕ್ರಮ ಸಂಖ್ಯೆ.: 18

ವಿಷಯ : ಹಿಮ್ಸ್ ಸಂಸ್ಥೆಯ ಆವರಣದಲ್ಲಿರುವ ನೂತನವಾಗಿ ನಿರ್ಮಾಣವಾಗುತ್ತಿರುವ 450 ಹಾಸಿಗೆಗಳ ಆಸ್ಪತ್ರೆಯ ಕಟ್ಟಡಕ್ಕೆ ಮಳೆ ನೀರು ಕೊಯ್ಲು ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ:ಆಕುಕ 34 ಕೆವಿಎಂ 2019, ಬೆಂಗಳೂರು, ದಿನಾಂಕ:02-02-2019
2. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ಉಪ-ವಿಭಾಗ ಹಾಸನರವರ ಅಂದಾಜು ಪಟ್ಟಿ ಪತ್ರ ದಿನಾಂಕ: 03.08.2022.

*-*-*

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ 450 ಹಾಸಿಗೆಗಳ ಸಾಮರ್ಥ್ಯದ ನೂತನ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯ ಕಟ್ಟಡ ನಿರ್ಮಿಸಲು ಉಲ್ಲೇಖಿತ ಪತ್ರ (1) ರಲ್ಲಿ ಟೆಂಡರ್ ಪ್ರೀಮಿಯಂ ಮೊತ್ತ ಸೇರಿ ರೂ.11714.91 ಲಕ್ಷಗಳಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಲಾಗಿದ್ದು, ಸದರಿ ಕಟ್ಟಡ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿರುತ್ತವೆ.

ಮುಂದುವರಿದು 450 ಹಾಸಿಗೆಗಳ ಸಾಮರ್ಥ್ಯದ ನೂತನ ಆಸ್ಪತ್ರೆಯ ಕಟ್ಟಡಕ್ಕೆ ಮಳೆನೀರು ಕೊಯ್ಲು ವ್ಯವಸ್ಥೆಯನ್ನು ಕಲ್ಪಿಸಲು ಕ್ರಮಕೈಗೊಳ್ಳಲು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಉಪ-ವಿಭಾಗ, ಹಾಸನ ರವರ ಅಂದಾಜು ಪಟ್ಟಿ ಪತ್ರ ದಿನಾಂಕ:03.08.2022 ರಂದು ಈ ಕೆಳಕಂಡಂತೆ ಸವಿವರ ಅಂದಾಜು ಪಟ್ಟಿ ಸಲ್ಲಿಸಿರುತ್ತಾರೆ.

| ಕ್ರಮ ಸಂಖ್ಯೆ | ಕಾಮಗಾರಿ ವಿವರ | ಅಂದಾಜು ಮೊತ್ತ (ರೂ.ಗಳಲ್ಲಿ) |
|---|---|---|
| 1 | Rain water harvesting works | 64,06,805.97 |
| 2 | GST 12% | 7,68,816.72 |
| 3 | Quality Auditing PMC Charges | 50,000.00 |
| 4 | Tender charges , MISC & Rounding off etc | 1,05,560.59 |
| | **Grand Total** | **80,50,000.00** |

ಸದರಿ ಕಾಮಗಾರಿಗಳನ್ನು ಸರ್ಕಾರದ ಸುತ್ತೋಲೆ ಸಂಖ್ಯೆ :ಸ.ಅ.ಇ./200/ಸಿ.ಎಸ್.ಎಸ್ 2019, ದಿನಾಂಕ:22.07.2019 ರ ಅನ್ವಯ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಜಲ ಶಕ್ತಿ ಅಭಿಯಾನ ಅನುಷ್ಠಾನಗೊಳಿಸಲು ಹಾಗೂ ನೀರಿನ ಕೊರತೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ದೃಷ್ಟಿಯಿಂದ ಸದರಿ ಕಾಮಗಾರಿಯು ಅವಶ್ಯಕವಾಗಿರುತ್ತದೆ.

Finance Officer
Hassan Institute of Medical Sciences
HASSAN - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.80,50,000.00 ಗಳ ವೆಚ್ಚವನ್ನು ಈ ಹಿಂದೆ ಸಂಸ್ಥೆಯ 350 ರಿಂದ 750 ಹಾಸಿಗೆಗಳಿಗೆ ಮೇಲ್ದರ್ಜೆಗೇರಿಸಿದ ಕಟ್ಟಡಕ್ಕೆ 04 ಲಿಫ್ಟ್‌ಗಳನ್ನು ಅಳವಡಿಸಿಕೊಳ್ಳಲು ಆಸ್ತಿ ಸೃಜನೆ ಲೆಕ್ಕ ಶೀರ್ಷಿಕೆ 2210–05–105–1–49–102 ಅಡಿ ಬಿಡುಗಡೆಯಾಗಿದ್ದ ಮೊತ್ತದಲ್ಲಿ ಕಾಮಗಾರಿ ಪೂರ್ಣಗೊಂಡು ಬಾಕಿ ಉಳಿದಿರುವ ಮೊತ್ತ ರೂ.67.56 ಲಕ್ಷಗಳನ್ನು ಬಳಸಿಕೊಳ್ಳಲು ಮತ್ತು ಕೊರತೆಯಾಗುವ ಮೊತ್ತ ರೂ. 12.94ಲಕ್ಷಗಳನ್ನು ಯೂಸರ್ಸ್ ನಿಧಿಯಿಂದ (User's fund) ಬಳಸಿಕೊಳ್ಳುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲು ವಿಷಯವನ್ನು ಆರ್ಥಿಕ ಸಮಿತಿ ಸಭೆಯಲ್ಲಿ ಮಂಡಿಸಿದೆ.

ತೀರ್ಮಾನ:

ಹಿಮ್ಸ್ ಸಂಸ್ಥೆಯ ಆವರಣದಲ್ಲಿರುವ ನೂತನವಾಗಿ ನಿರ್ಮಾಣವಾಗುತ್ತಿರುವ 450 ಹಾಸಿಗೆಗಳ ಆಸ್ಪತ್ರೆಯ ಕಟ್ಟಡಕ್ಕೆ ಮಳೆ ನೀರು ಕೊಯ್ಲು ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಸಭೆಯು ಕೂಲಂಕುಷವಾಗಿ ಚರ್ಚಿಸಿತು. ರೂ. **80.50** ಲಕ್ಷಗಳ ವೆಚ್ಚದಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ **450** ಹಾಸಿಗೆಗಳ ಕಟ್ಟಡಕ್ಕೆ **Rain water harvesting** ಕಾಮಗಾರಿಯನ್ನು ಕೈಗೊಳ್ಳಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು. ಸದರಿ ವೆಚ್ಚವನ್ನು ಸಂಸ್ಥೆಗೆ ಈ ಹಿಂದೆ ಬಿಡುಗಡೆಯಾಗಿದ್ದ **Assest creation grant** ನಡಿ ಉಳಿಕೆಯಾಗಿ ಲಭ್ಯವಿರುವ ಮೊತ್ತ ರೂ.**67.56** ಲಕ್ಷಗಳನ್ನು ಸದರಿ ಕಾಮಗಾರಿಗೆ ಬಳಸಿಕೊಳ್ಳಲು ಹಾಗೂ ಕೊರತೆಯಾಗುವ ಅನುದಾನ ರೂ.12.94 ಲಕ್ಷಗಳನ್ನು ಸಂಸ್ಥೆಯ ಯೂಸರ್ಸ್ ನಿಧಿಯಿಂದ ಭರಿಸಲು ತೀರ್ಮಾನಿಸಿತು.

Finance Officer
Hassan Institute of Medical Sciences
HASSAN - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

# ಅಜೆಂಡಾ ಕ್ರಮ ಸಂಖ್ಯೆ: 19

ವಿಷಯ: ಸಂಸ್ಥೆಯ ಮುಖ್ಯ ಶಸ್ತ್ರಚಿಕಿತ್ಸಾಗಾರ, ಕ್ರಿಟಿಕಲ್ ಏರಿಯಾ ಹಾಗೂ ಇತರೆ ವಿಭಾಗಗಳಲ್ಲಿ **Fumigation** ಮಾಡಲು **waterless Stabilized H202 solution** ಖರೀದಿಸುವ ಬಗ್ಗೆ.

*-*-*

ಸಂಸ್ಥೆಯ ಮುಖ್ಯಶಸ್ತ್ರಚಿಕಿತ್ಸಾಗಾರ, ಐ.ಸಿ.ಯು, ಡಯಾಲಿಸಿಸ್, ಲೇಬರ್ ರೂಂ ಮತ್ತು ಸಿ.ಎಸ್.ಎಸ್.ಡಿ ಇತರೆ ವಿಭಾಗಗಳಿಗೆ Aero Fogger Pro Fogging Machineಗಳಿಗೆ waterless Stabilized H202 solution ಅಗತ್ಯವಿದ್ದು, ಪ್ರಸುತ್ತ ವಿಭಾಗದಲ್ಲಿ Bioshield (2% Glutaraldehyde, 5% Benzalkonium chloride) ಉಪಯೋಗಿಸುತ್ತಿದ್ದು, ಇದರಿಂದ ವಿಭಾಗದಲ್ಲಿ ಕ್ರಿಟಿಕಲ್ ಏರಿಯಾಗಳನ್ನು 24-48 ಗಂಟೆಗಳವರೆಗೆ ಸಂಪೂರ್ಣವಾಗಿ ಮುಚ್ಚಿ ಸೀಲ್ ಮಾಡಬೇಕಾಗಿರುತ್ತದೆ ಹಾಗೂ ಆರೋಗ್ಯ ಸಿಬ್ಬಂದಿಗಳಿಗೆ ಮತ್ತು ರೋಗಿಗಳಿಗೆ ಕಣ್ಣು ಉರಿ, ಗಂಟಲು ಉರಿ, ಚರ್ಮ ಉರಿ ಹಾಗೂ ಇತರೆ ಅಡ್ಡ ಪರಿಣಾಮಗಳು ಉಂಟಾಗುವ ಸಂಭವವಿರುತ್ತದೆ. ಆದರೆ Waterless Stabilized Hydrogen peroxide ಉಪಯೋಗಿಸಿದಲ್ಲಿ ಕೇವಲ 2-3 ಗಂಟೆಗಳ ಕಾಲ ಮಾತ್ರ ಕ್ರಿಟಿಕಲ್ ಏರಿಯಾಗಳನ್ನು ಮುಚ್ಚಿ ಸೀಲ್ ಮಾಡಬೇಕಾಗುತ್ತದೆ. ಅಲ್ಲದೇ Formaline ಮತ್ತು Glutaraldehyde ರಾಸಾಯನಿಕಗಳಿಗೆ ಹೋಲಿಸಿದಲ್ಲಿ Waterless Stabilized Hydrogen peroxide ನ Toxicity ತುಂಬಾ ಕಡಿಮೆ ಇರುತ್ತದೆ. ಮಿಣಿ ಜೀವಶಾಸ್ತ್ರ ವಿಭಾಗದ ಮುಖ್ಯಸ್ಥರು ಪ್ರಸ್ತುತ ಹಳೆಯ ವಿಧಾನದಲ್ಲಿ Fumigation ಮಾಡುತ್ತಿದ್ದು waterless H202 solution ನಿಂದ ಹೆಚ್ಚಿನ ಪ್ರಯೋಜನವಿರುವುದಾಗಿ ಅಭಿಪ್ರಯಿಸಿದರು. ಸದರಿ ರಾಸಾಯನಿಕದಿಂದ ಕ್ರಿಟಿಕಲ್ ಏರಿಯಾಗಳಾದ ಡಯಾಲಿಸಿಸ್, ಲೇಬರ್ ರೂಂ, ಸಿ.ಎಸ್.ಎಸ್.ಡಿ ಮತ್ತು ಮುಖ್ಯಶಸ್ತ್ರ ಚಿಕಿತ್ಸಾಗಾರಗಳಲ್ಲಿ ಪ್ರಮುಖವಾಗಿ ಬಳಸಬಹುದಾಗಿದೆ.

| Sl No. | Particulars | Quantity for one year | Price Per liter in Rs. | Approximate Cost in Rs. (including 18% GST) |
|---|---|---|---|---|
| 1 | Waterless Stabilized & Enhanced 6 percent H202 base ready to use Fogging chemical solution 5 liter can | 312 cans | 3235=00 | 12,00,000=00 |

Finance Officer
Hassan Institute of Medical Sciences
HASSAN - 573 201



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

ಸಂಸ್ಥೆಯ ಬೋಧಕ ಆಸ್ಪತ್ರೆಯ ಮುಖ್ಯ ಶಸ್ತ್ರ ಚಿಕಿತ್ಸಾ ವಿಭಾಗಕ್ಕೆ ಅಗತ್ಯವಿರುವ Aero Fogger Pro Fogging Machineಗಳಿಗೆ Stabilized & Enhanced 6 percent H202 base ready to use Fogging chemical solutionಗಳಿಗೆ ಅಂದಾಜು ಮೊತ್ತ ರೂ.12.00 ಲಕ್ಷಗಳಾಗಿದ್ದು, ಸದರಿ ವೆಚ್ಚವನ್ನು ಸಂಸ್ಥೆಯ ಎ.ಆರ್.ಎಸ್ ಖಾತೆಯಿಂದ ಭರಿಸುವ ಬಗ್ಗೆ ಹಾಗೂ ಕೆ.ಟಿ.ಪಿ.ಪಿ ನಿಯಮಾನುಸಾರ ಇ-ಟೆಂಡರ್ ಪ್ರಕ್ರಿಯೆ ಕೈಗೊಳ್ಳುವುದರ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲು ವಿಷಯವನ್ನು ಆರ್ಥಿಕ ಸಮಿತಿ ಸಭೆಯಲ್ಲಿ ಮಂಡಿಸಿದೆ.

ತೀರ್ಮಾನ:

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸಂಸ್ಥೆಯ ಮುಖ್ಯ ಶಸ್ತ್ರಚಿಕಿತ್ಸಾಗಾರ ಹಾಗೂ ಕ್ರಿಟಿಕಲ್ ಏರಿಯಾಗಳಾದ ಡಯಾಲಿಸಿಸ್, ಲೇಬರ್ ರೂಮ್, ಸಿ.ಎಸ್.ಎಸ್.ಡಿ. ಮುಂತಾದ ಇತರೆ ವಿಭಾಗಗಳಲ್ಲಿ **Fumigation** ಮಾಡಲು **Waterless Stabilized H202 solution** ಅನ್ನು ಕೆ.ಟಿ.ಪಿ.ಪಿ ಅಧಿನಿಯಮಾನುಸಾರ ಇ-ಟೆಂಡರ್ ಮಾಡಿ ಅಂದಾಜು ಮೊತ್ತ ರೂ.12.00 ಲಕ್ಷಗಳ ಖರೀದಿಸಲು ಸಭೆಯು ಅನುಮೋದಿಸಿತು. ಸದರಿ ವೆಚ್ಚವನ್ನು ಯೂಸರ್ಸ್ ನಿಧಿಯಿಂದ ಭರಿಸಲು ತೀರ್ಮಾನಿಸಿತು.

Finance Officer
Hassan Institute of Medical Sciences

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

# ಅಜೆಂಡಾ ಕ್ರಮ ಸಂಖ್ಯೆ: 20

ವಿಷಯ: ಮಿಲಿಟರಿ ಸೇವೆಯಿಂದ ನಿವೃತ್ತಿ ಹೊಂದಿ ಮಾಜಿ-ಸೈನಿಕ ಕೋಟಾದಡಿ ನೇಮಕಾತಿಗೊಂಡಿರುವ ನೌಕರರಿಗೆ ಕೆ.ಸಿ.ಎಸ್.ಆರ್ 41(ಸಿ) ಉಪನಿಯಮ(iv) ರನ್ವಯ ವೇತನ ಸಂರಕ್ಷಣೆ ನೀಡುವ ಕುರಿತು.

ಎ) ವಿಷಯ: ಷಣ್ಮುಖ ಪ್ರಥಮ ದರ್ಜೆ ಸಹಾಯಕರು ಇವರಿಗೆ ಕೋರಿಕೆಯಂತೆ ಕೆ.ಸಿ.ಎಸ್.ಆರ್ 41(ಸಿ)ಉಪನಿಯಮ(iv) ರನ್ವಯ ವೇತನ ಸಂರಕ್ಷಣೆ ನೀಡುವ ಕುರಿತು.,

ಉಲ್ಲೇಖ: ನೌಕರರ ಮನವಿ ದಿನಾಂಕ:03.07.2020

*-*-*

ಶ್ರೀ.ಷಣ್ಮುಖ ಪ್ರಥಮ ದರ್ಜೆ ಸಹಾಯಕರು, ಹಿಮ್ಸ್, ಹಾಸನ ಇವರು ಕಛೇರಿ ಅಧಿಕೃತ ಜ್ಞಾಪನ ಪತ್ರಸಂಖ್ಯೆ:ಹಿಮ್ಸ್/ಸಿ(2)/15/2010-11, ದಿನಾಂಕ:20.10.2011 ರಂದು ನೇಮಕಾತಿ ಹೊಂದಿದ್ದು, ದಿನಾಂಕ :20.10.2011 ರಿಂದ ಪ್ರ.ದ.ಸರಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಸದರಿಯವರು ಮಿಲಿಟರಿ ಸೇವೆಯಲ್ಲಿ ಪಡೆಯುತ್ತಿದ್ದ ಅಂತಿಮ ವೇತನಕ್ಕೆ ಸಂವಾದಿಯಾಗಿ ದಿನಾಂಕ:20.10.2011 ರಿಂದ ನಿಗದಿಪಡಿಸಿಕೊಡಲು ಕೋರಿ ಮನವಿ ಸಲ್ಲಿಸಿರುತ್ತಾರೆ.

ಆರ್ಮಿ ಮೆಡಿಕಲ್ ಕಾಪ್ಸ್ ಕಛೇರಿ ರವರ ಪತ್ರ ಸಂಖ್ಯೆ:500137/ಎಲ್‌ಪಿಸಿ/ಜಿಇಎನ್/2022, ದಿನಾಂಕ:21-03-2022 ರನ್ವಯ ಸದರಿಯವರ ಅಂತಿಮ ವೇತನ ಪ್ರಮಾಣ ಪತ್ರದನ್ವಯ ಸೈನಿಕ ಸೇವೆಯಲ್ಲಿ ಅಂತಿಮವಾಗಿ ಪಡೆದ ಮೂಲ ವೇತನ ರೂ 25500/- ಹಾಗೂ ಗ್ರೇಡ್ ಪೇ ರೂ.0/- ಆಗಿರುತ್ತದೆ. ಶ್ರೀ ಷಣ್ಮುಖ ಪ್ರಥಮ ದರ್ಜೆ ಸಹಾಯಕರು,ಪ್ರ.ದ.ಸ.ರಾಗಿ ಕರ್ತವ್ಯಕ್ಕೆ ಸೇರಿದ ದಿನಾಂಕದಿಂದ ಅಂದರೆ ದಿನಾಂಕ:20.10.2011 ರಿಂದ ವೇತನವನ್ನು ನಿಗದಿಪಡಿಸಬೇಕಾಗಿರುತ್ತದೆ. ಸದರಿಯವರ ವೇತನವು ಪ್ರ.ದ.ಸ. ವೃಂದದ ಅಂತಿಮ ಮೂಲ ವೇತನಕ್ಕಿಂತ ಹೆಚ್ಚಾಗಿರುವುದರಿಂದ, ಕರ್ನಾಟಕ ಸಿವಿಲ್ ಸೇವಾ ನಿಯಮಗಳು ನಿಯಮ 41(ಸಿ)ಉಪನಿಯಮ (iv) ರಂತೆ ಗರಿಷ್ಠ ವೇತನಕ್ಕೆ ನಿಗದಿಪಡಿಸಬೇಕಾಗಿರುತ್ತದೆ ಹಾಗೂ ದಿನಾಂಕ:20.10.2011 ಕ್ಕೆ ಅಂತಿಮ ಗರಿಷ್ಠ ವೇತನಕ್ಕೆ ನಿಗಧಿಪಡಿಸಿರುವುದರಿಂದ, ದಿನಾಂಕ:01.10.2012 ರಿಂದ ಅನ್ವಯವಾಗುವಂತೆ ಸದರಿಯವರಿಗೆ ಸ್ಥಗಿತ ವೇತನ ಬಡ್ತಿಗಳನ್ನು ಮಂಜೂರು ಮಾಡಿ ಹಿಂಬಾಕಿ ಮೊತ್ತ ರೂ ಅಂದಾಜು 29,91,769.00ಪಾವತಿಮಾಡಬೇಕಾಗಿರುತ್ತದೆ .

ಕ.ನಾ.ಸೇ.ನಿಯಮಗಳು ನಿಯಮ 41(ಸಿ)(iv) ರಂತೆ ಹಾಗೂ ಕಾಲಕಾಲಕ್ಕೆ ಅನ್ವಯಿಸುವ ವೇತನ ಬಡ್ತಿ: ಸ್ಥಗಿತ ವೇತನ ಬಡ್ತಿಗಳನ್ನು ನಿಗದಿಪಡಿಸಬೇಕಾಗಿರುತ್ತದೆ, ಆದ್ದರಿಂದ ಶ್ರೀ ಷಣ್ಮುಖ ಪ್ರಥಮ ದರ್ಜೆ ಸಹಾಯಕರು ಇವರಿಗೆ ದಿನಾಂಕ:20.10.2011 ರಿಂದ ವೇತನವನ್ನು ಈ

Finance Officer
Hassan Institute of Medical Sciences
HASSAN - 573 201



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

<u>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ</u>

ಕೆಳಗಿನಂತೆ ಮನರ್ ನಿಗದಿಪಡಿಸಿದ್ದು, ಮತ್ತು ಇವರಿಗೆ ದಿನಾಂಕ:20-10-2011 ರಿಂದ ನಿಗದಿಪಡಿಸಿದ ವೇತನ ವ್ಯತ್ಯಾಸವನ್ನು ಪಾವತಿ ಮಾಡುವುದರ ಬಗ್ಗೆ ಚರ್ಚಿಸಲು ಸಂಸ್ಥೆಯ ಆರ್ಥಿಕ ಮಂಡಳಿ ಸಭೆಯ ಮುಂದೆ ಮಂಡಿಸಿದೆ.

**ಶ್ರೀ ಷಣ್ಮುಖ., ಪ್ರ.ದ.ಸಹಾಯಕರು, ಹಿಮ್ಸ್, ಹಾಸನ ಇವರ ಕಾಲ್ಪನಿಕ ವೇತನ ಶ್ರೇಣಿ ನಿಗದಿ ವಿವರ:**

| ಕ್ರಸಂ | ವೇತನ ಶ್ರೇಣಿ | ವರ್ಷ | ನಿಗದಿ ಮಾಡಿರುವ ಮೂಲ ವೇತನ | ನಿಗದಿ ಮಾಡಬೇಕಾಗಿದ್ದ ಮೂಲ ವೇತನ | ಷರಾ |
|---|---|---|---|---|---|
| 1 | ಪ್ರ.ದ.ಸ ರವರ ವೇತನ ಶ್ರೇಣಿ 7275-175-7800-200-8600-225-9500-250-10500-300-12300-350-13350 | 20-10-2011 | 7275 | ಮಿಲಿಟರಿಯಲ್ಲಿನ ವೇತನ ಸಂರಕ್ಷಿಸಿ ಕ.ನಾ.ಸೇ. ನಿಯಮ 41(ಸಿ) (iv) ರ ಪ್ರಕಾರ ವೇತನ ನಿಗದಿ 13350/- | ಸದರಿ ನೌಕರರು ದಿ:01-01-2003 ರಂದು ಸೈನಿಕ ವೃತ್ತಿಯಿಂದ ನಿವೃತ್ತಿ ಹೊಂದಿದ್ದು, ಅಲ್ಲಿಯ ಅವರ ಐಕಅ ರೂ 25500/- ಇರುತ್ತದೆ. ಸದರಿಯವರು ಈ ಸಂಸ್ಥೆಗೆ ಮಾಜಿ ಸೈನಿಕ ಕೋಟಾದಡಿ ನೇಮಕಾತಿ ಹೊಂದಿರುತ್ತಾರೆ. |
| 2 | 14550-350-14600-400-17200-450-19000-500-21000-600-24600-700-26700 | 01-04-2012 | 14550 | 26700 | ಪರಿಷ್ಕೃತ ವೇತನ ಶ್ರೇಣಿ ಜಾರಿ: ಸರ್ಕಾರಿ ಆದೇಶಸಂ/ಎಫ್‌ಡಿ/07/ಎಸ್‌ಆರ್‌ಪಿ /2012 ದಿನಾಂಕ:21-04-2012ರ ಪ್ರಕಾರ ದಿನಾಂಕ:01-04-2012ಕ್ಕೆ |
| 3 | 14550-350-14600-400-17200-450-19000-500-21000-600-24600-700-26700 | 01-10-2012 | 14900 | 26700+700=27400 | 1ನೇ ಸ್ಥಗಿತ ವೇತನ ಬಡ್ತಿ |
| 4 | 14550-350-14600-400-17200-450-19000-500-21000-600-24600-700-26700 | 01-10-2013 | 15250 | 26700+700+700 = 28100 | 2ನೇ ಸ್ಥಗಿತ ವೇತನ ಬಡ್ತಿ |
| 5 | 14550-350-14600-400-17200-450-19000-500-21000-600-24600-700-26700 | 01-10-2014 | 15600 | 26700+700+700+70 =28800 | 3ನೇ ಸ್ಥಗಿತ ವೇತನ ಬಡ್ತಿ |

Finance Officer
Hassan Institute of Medical Sciences

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

## ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

| ಕ್ರಸಂ | ವೇತನ ಶ್ರೇಣಿ | ವರ್ಷ | ನಿಗದಿ ಮಾಡಿರುವ ಮೂಲ ವೇತನ | ನಿಗದಿ ಮಾಡಬೇಕಾಗಿದ್ದ ಮೂಲ ವೇತನ | ಷರಾ |
|---|---|---|---|---|---|
| 6 | 14550–350–14600–400–17200–450–19000–500–21000–600–24600–700–26700 | 01–10–2015 | 16000 | 26700+700+700+700+700=29500 | 4ನೇ ಸ್ಥಗಿತ ವೇತನ ಬಡ್ತಿ |
| 7 | 14550–350–14600–400–17200–450–19000–500–21000–600–24600–700–26700 | 01–10–2016 | 16400 | 26700+700+700+700+700 +700=30200 | 5ನೇ ಸ್ಥಗಿತ ವೇತನ ಬಡ್ತಿ |
| 8 | 27650–650–29600–750–32600–850–36000–950–39800–1100–46400–1250–52650 | 01–07–2017 | 28950 | 52650+1250PP= 53900 | ಪರಿಷ್ಕೃತ ವೇತನ ಶ್ರೇಣಿ ಜಾರಿ: ಸರ್ಕಾರಿ ಆದೇಶ ಸಂ/ಎಫ್‌ಡಿ/06/ ಎಸ್‌ಆರ್‌ಪಿ/ 2018 ದಿನಾಂಕ:19–04–2018ರ ಪ್ರಕಾರ ದಿನಾಂಕ:01–07–2017ಕ್ಕೆ* (RPR) only ನಿಗದಿ, ಆರ್ಥಿಕ ಸೌಲಭ್ಯ ಇರುವುದಿಲ್ಲ. |
| 9 | 27650–650–29600–750–32600–850–36000–950–39800–1100–46400–1250–52650 | 01–10–2017 | 29600 | 52650+2700PP= 55350 | ಸದರಿ ನೌಕರರಿಗೆ ದಿ–01–10–2017ಕ್ಕೆ ಪರಿಷ್ಕೃತ ವೇತನ ಶ್ರೇಣಿ–2018ರ ನಿಯಮಗಳು –8(1) ರ ಪ್ರಕಾರ 6ನೇ ಸ್ಥಗಿತ ವೇತನ ಬಡ್ತಿಯು 2017ರ ಜುಲೈ1ರ ತರುವಾಯ ಆದರೆ 2018ರ ಜುಲೈ 1 ಕ್ಕಿಂತ ಮೊದಲು ಅಂದರೆ ದಿ:01–10–2017ರಂದು ಪ್ರಾಪ್ತವಾಗು ತ್ತಿರುವುದರಿಂದ ಪ್ರಸಕ್ತ ವೇತನ ಶ್ರೇಣಿಯಲ್ಲಿ ನೌಕರರಿಗೆ ಪ್ರಾಪ್ತವಾಗುತ್ತಿದ್ದ 6ನೇ ಸ್ಥಗಿತ ವೇತನ ಬಡ್ತಿ ರೂ 26700+700+700+700+700+700+ 700 ಒಟ್ಟು ರೂ.32900ಕ್ಕೆ ಸಂವಾದಿಯಾಗಿ ರೂ.52650+ 2700 PP ಹಂತದಲ್ಲಿ ವೇತನವನ್ನು ಪುನರ್ ನಿಗದಿಗೊಳಿಸಿದೆ ಇದು 6ನೇ ಸ್ಥಗಿತ ವೇತನ ಬಡ್ತಿಯಾಗಿರುತ್ತದೆ. |

Finance Officer
Hassan Institute of Medical Sciences
HASSAN - 573 201



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

## ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

| ಕ್ರಸಂ | ವೇತನ ಶ್ರೇಣಿ | ವರ್ಷ | ನಿಗದಿ ಮಾಡಿರುವ ಮೂಲ ವೇತನ | ನಿಗದಿ ಮಾಡಬೇಕಾಗಿದ್ದ ಮೂಲ ವೇತನ | ಷರಾ |
|---|---|---|---|---|---|
| 10 | 27650–650–29600–750–32600–850–36000–950–39800–1100–46400–1250–52650 | 01–10–2018 | 30350 | 52650+2700PP+1250 =56600 | 7ನೇ ಸ್ಥಗಿತ ವೇತನ ಬಡ್ತಿ |
| 11 | 27650–650–29600–750–32600–850–36000–950–39800–1100–46400–1250–52650 | 01–07–2019 | 31100 | 52650+2700PP+1250 +1250=57850 | 8ನೇ ಸ್ಥಗಿತ ವೇತನ ಬಡ್ತಿ |
| 12 | 27650–650–29600–750–32600–850–36000–950–39800–1100–46400–1250–52650 | 01–07–2020 | 31850 | 52650+2700PP+1250 +1250=57850 | ಸದರಿ ನೌಕರರಿಗೆ ವೇತನ ಶ್ರೇಣಿ ರೂ 27650–52650 ರಲ್ಲಿ ದಿನಾಂಕ: 01–07–2019ಕ್ಕೆ 8 ನೇ ಸ್ಥಗಿತ ವೇತನ ಬಡ್ತಿ ಮಂಜೂರಾಗಿರುವುದರಿಂದ ದಿ: 01–07–2020 ಕ್ಕೆ ವೇತನ ಬಡ್ತಿ ಲಭ್ಯವಿಲ್ಲ |
| 13 | 27650–650–29600–750–32600–850–36000–950–39800–1100–46400–1250–52650 | 01–07–2021 | 32600 | 52650+2700PP+1250 + 1250=57850 | ಸದರಿ ನೌಕರರಿಗೆ ವೇತನ ಶ್ರೇಣಿ ರೂ 27650–52650 ರಲ್ಲಿ ದಿನಾಂಕ:01–07–2019ಕ್ಕೆ 8 ನೇ ಸ್ಥಗಿತ ವೇತನ ಬಡ್ತಿ ಮಂಜೂರಾಗಿರುವುದರಿಂದ ದಿ:01–07–2021 ಕ್ಕೆ ವೇತನ ಬಡ್ತಿ ಲಭ್ಯವಿಲ್ಲ |
| 14 | 30350–750–32600–850–36000–950–39800–1100–46400–1250–53900–1450–58250 | 20–10–2021 | 33450 | 58250 | 10 ವರ್ಷಗಳ ಖಿಃಕ ನೀಡಿದ್ದು, ಈಗಾಗಲೇ ನೌಕರರು ದಿ:20–10–2021 ರಂದು ರೂ57850/– ವೇತನ ಪಡೆಯುತ್ತಿರುವುದರಿಂದ 10 ವರ್ಷಗಳ ಕಾಲಿಕ ವೇತನ ಶ್ರೇಣಿ ರೂ(30350–58250) ರಲ್ಲಿ ಮುಂದಿನ ವೇತನದ ಹಂತ ರೂ 58250/– ನಿಗದಿಪಡಿಸಿದೆ. |
| 15 | 30350–750–32600–850–36000–950–39800–1100–46400–1250–53900–1450–58250 | 01–07–2022 | 34300 | 58250 | ಸದರಿ ನೌಕರರಿಗೆ 2022 ಕ್ಕೆ ವೇತನ ಬಡ್ತಿ ಲಭ್ಯವಿಲ್ಲ |

Finance Officer
Hassan Institute of Medical Sciences
HASSAN - 573 201



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

## ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

ಬಿ) ವಿಷಯ: ಶ್ರೀ ದೇವರಾಜಪ್ಪ ಹೆಚ್.ಜೆ.,ಲ್ಯಾಬ್ ಅಸಿಸ್ಟೆಂಟ್/ಅಟೆಂಡರ್, ಇವರಿಗೆ ಕೋರಿಕೆಯಂತೆ ಕೆ.ಸಿ.ಎಸ್.ಆರ್ 41(ಸಿ)ಉಪನಿಯಮ(**iv**) ರನ್ವಯ ವೇತನ ಸಂರಕ್ಷಣೆ ನೀಡುವ ಕುರಿತು.,

ಉಲ್ಲೇಖ: ನೌಕರರ ಮನವಿ ದಿನಾಂಕ:01.02.2022.

*--*--*

ಶ್ರೀ. ದೇವರಾಜಪ್ಪ ಹೆಚ್.ಜೆ., ಲ್ಯಾಬ್ ಅಸಿಸ್ಟೆಂಟ್/ಅಟೆಂಡರ್, ಹಿಮ್ಸ್, ಹಾಸನ ಇವರು ಕಚೇರಿ ಅಧಿಕೃತ ಜ್ಞಾಪನ ಪತ್ರಸಂಖ್ಯೆ:ಹಿಮ್ಸ್/ಸಿ (2)/05/2010-11, ದಿನಾಂಕ:20.10.2011 ರಂದು ನೇಮಕಾತಿ ಹೊಂದಿದ್ದು, ದಿನಾಂಕ :20.10.2011 ರಿಂದ ಲ್ಯಾಬ್ ಅಸಿಸ್ಟೆಂಟ್/ಅಟೆಂಡರ್‌ರಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಸದರಿಯವರು ಮಿಲಿಟರಿ ಸೇವೆಯಲ್ಲಿ ಪಡೆಯುತ್ತಿದ್ದ ಅಂತಿಮ ವೇತನಕ್ಕೆ ಸಂವಾದಿಯಾಗಿ ದಿನಾಂಕ:20.10.2011 ರಿಂದ ನಿಗದಿಪಡಿಸಿಕೊಡಲು ಕೋರಿ ಮನವಿ ಸಲ್ಲಿಸಿರುತ್ತಾರೆ.

Records The Mech Inf Regt ರವರ ಪತ್ರ ಸಂಖ್ಯೆ: SR/14918182/NER(Resti)61878 ದಿನಾಂಕ:02-07-2021 ರನ್ವಯ ಸದರಿಯವರ ಅಂತಿಮ ವೇತನ ಪ್ರಮಾಣ ಪತ್ರದನ್ವಯ ಸೈನಿಕ ಸೇವೆಯಲ್ಲಿ ಅಂತಿಮವಾಗಿ ಪಡೆದ ಮೂಲ ವೇತನ ರೂ.8750/- ಹಾಗೂ ಗ್ರೇಡ್ ಪೇ ರೂ.0/- ಆಗಿರುತ್ತದೆ. ಶ್ರೀ.ದೇವರಾಜಪ್ಪ ಹೆಚ್.ಜೆ., ಲ್ಯಾಬ್ ಅಸಿಸ್ಟೆಂಟ್/ಅಟೆಂಡರ್, ಆಗಿ ಕರ್ತವ್ಯಕ್ಕೆ ಸೇರಿದ ದಿನಾಂಕದಿಂದ ಅಂದರೆ ದಿನಾಂಕ:20.10.2011 ರಿಂದ ವೇತನವನ್ನು ನಿಗದಿಪಡಿಸಬೇಕಾಗಿರುತ್ತದೆ. ಸದರಿಯವರ ವೇತನವು ಲ್ಯಾಬ್ ಅಸಿಸ್ಟೆಂಟ್/ಅಟೆಂಡರ್, ವೃಂದದ ಅಂತಿಮ ಮೂಲ ವೇತನಕ್ಕಿಂತ ಹೆಚ್ಚಾಗಿರುವುದರಿಂದ, ಕರ್ನಾಟಕ ಸಿವಿಲ್ ಸೇವಾ ನಿಯಮಗಳು ನಿಯಮ 41(ಸಿ)ಉಪನಿಯಮ (iv) ರಂತೆ ಗರಿಷ್ಠ ವೇತನಕ್ಕೆ ನಿಗದಿಪಡಿಸಬೇಕಾಗಿರುತ್ತದೆ ಹಾಗೂ ದಿನಾಂಕ:20.10.2011 ಕ್ಕೆ ಅಂತಿಮ ಗರಿಷ್ಠ ವೇತನಕ್ಕೆ ನಿಗಧಿಪಡಿಸಿರುವುದರಿಂದ, ದಿನಾಂಕ:01.10.2012 ರಿಂದ ಅನ್ವಯವಾಗುವಂತೆ ಸದರಿಯವರಿಗೆ ಸ್ಥಗಿತ ವೇತನ ಬಡ್ತಿಗಳನ್ನು ಮಂಜೂರು ಮಾಡಿ ಹಿಂಬಾಕಿ ಮೊತ್ತ ರೂ. ಅಂದಾಜು 13,22,719.00ಪಾವತಿಮಾಡಬೇಕಾಗಿರುತ್ತದೆ.

ಕ.ನಾ.ಸೇ.ನಿಯಮಗಳು ನಿಯಮ 41(ಸಿ)(iv) ರಂತೆ ಹಾಗೂ ಕಾಲಕಾಲಕ್ಕೆ ಅನ್ವಯಿಸುವ ವೇತನ ಬಡ್ತಿ: ಸ್ಥಗಿತ ವೇತನ ಬಡ್ತಿಗಳನ್ನು ನಿಗದಿಪಡಿಸಬೇಕಾಗಿರುತ್ತದೆ, ಆದ್ದರಿಂದ ಶ್ರೀ ದೇವರಾಜಪ್ಪ ಹೆಚ್.ಜೆ., ಲ್ಯಾಬ್ ಅಸಿಸ್ಟೆಂಟ್/ಅಟೆಂಡರ್, ಇವರಿಗೆ ದಿನಾಂಕ:20.10.2011 ರಿಂದ ವೇತನವನ್ನು ಈ ಕೆಳಗಿನಂತೆ ಪುನರ್ ನಿಗದಿಪಡಿಸಿದ್ದು, ಮತ್ತು ಇವರಿಗೆ ದಿನಾಂಕ:20-10-2011 ರಿಂದ ನಿಗದಿಪಡಿಸಿದ ವೇತನ ವ್ಯತ್ಯಾಸವನ್ನು ಪಾವತಿ ಮಾಡುವುದರ ಬಗ್ಗೆ ಚರ್ಚಿಸಲು ಸಂಸ್ಥೆಯ ಆರ್ಥಿಕ ಮಂಡಳಿ ಸಭೆಯ ಮುಂದೆ ಮಂಡಿಸಿದೆ.

Finance Officer
Hassan Institute of Medical Sciences
HASSAN - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

## ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

ಶ್ರೀ ದೇವರಾಜಪ್ಪ ಹೆಚ್.ಜೆ., ಲ್ಯಾಬ್ ಅಸಿಸ್ಟೆಂಟ್/ಅಟೆಂಡರ್, ಹಿಮ್ಸ್, ಹಾಸನ ಇವರ ಕಾಲ್ಪನಿಕ ವೇತನ ಶ್ರೇಣಿ ನಿಗದಿ ವಿವರ:

| ಕ್ರಸಂ | ವೇತನ ಶ್ರೇಣಿ | ಸೇವೆಗೆ ಸೇರಿದ ದಿನಾಂಕ | ನಿಗದಿ ಮಾಡಿರುವ ಮೂಲ ವೇತನ | ನಿಗದಿ ಮಾಡಬೇಕಾಗಿದ್ದ ಮೂಲ ವೇತನ | ಷರಾ |
|---|---|---|---|---|---|
| 1 | ಗ್ರೂಪ್ ಡಿ ವೇತನ ಶ್ರೇಣಿ 4800–100–6000–125–6500–150–7100–175–7275 | 20–10–2011 | 4800/– | ಮಿಲಿಟರಿಯಲ್ಲಿನ ವೇತನ ಸಂರಕ್ಷಿಸಿ ಕ.ನಾ.ಸೇ.ನಿಯಮ 41(ಸಿ) ಉಪನಿಯಮ (2) ರ ಪ್ರಕಾರ ವೇತನ ನಿಗದಿ7275/– | ಸದರಿ ನೌಕರರು ದಿ:30–04–2009 ರಂದು ಸೈನಿಕ ವೃತ್ತಿಯಿಂದ ನಿವೃತ್ತಿ ಹೊಂದಿದ್ದು, ಅಲ್ಲಿಯ ಅವರ ಐಕಅ ರೂ 8750/– ಇರುತ್ತದೆ. ಸದರಿಯವರು ಈ ಸಂಸ್ಥೆಗೆ ಮಾಜಿ ಸೈನಿಕ ಕೋಟಾದಡಿ ನೇಮಕಾತಿ ಹೊಂದಿರುತ್ತಾರೆ. |
| 2 | 9600–200–12000–250–13000–300–14200–350–14550 | 01–04–2012 | 9600/– | 14550/– | ಸರ್ಕಾರಿ ಆದೇಶ ಸಂ/ಎಫ್‌ಡಿ/07/ ಎಸ್‌ಆರ್‌ಪಿ/2012 ದಿನಾಂಕ: 21–04–2012ರ ಪ್ರಕಾರ ದಿನಾಂಕ: 01–04–2012 ಕ್ಕೆ ಪರಿಷ್ಕೃತ ವೇತನ ಶ್ರೇಣಿ ಜಾರಿ |
| 3 | 9600–200–12000–250–13000–300–14200–350–14550 | 01–10–2012 | 9800/– | 14550 +350=14900/– | 1ನೇ ಸ್ಥಗಿತ ವೇತನ ಬಡ್ತಿ |
| 4 | 9600–200–12000–250–13000–300–14200–350–14550 | 01–10–2013 | 10000/– | 14550 +350+350 =15250/– | 2ನೇ ಸ್ಥಗಿತ ವೇತನ ಬಡ್ತಿ |
| 5 | 9600–200–12000–250–13000–300–14200–350–14550 | 01–10–2014 | 10200/– | 14550 +350+350+350 = 15600/– | 3ನೇ ಸ್ಥಗಿತ ವೇತನ ಬಡ್ತಿ |
| 6 | 9600–200–12000–250–13000–300–14200–350–14550 | 01–10–2015 | 10400/– | 14550 +350+350+350+350 =15950/– | 4ನೇ ಸ್ಥಗಿತ ವೇತನ ಬಡ್ತಿ |
| 7 | 9600–200–12000–250–13000–300–14200–350–14550 | 01–10–2016 | 10600/– | 14550 +350+350+350+350+350 16300/– | 5ನೇ ಸ್ಥಗಿತ ವೇತನ ಬಡ್ತಿ |

Finance Officer
Hassan Institute of Medical Sciences
HASSAN - 573 201



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

## ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

| ಕ್ರಸಂ | ವೇತನ ಶ್ರೇಣಿ | ಸೇವೆಗೆ ಸೇರಿದ ದಿನಾಂಕ | ನಿಗದಿ ಮಾಡಿರುವ ಮೂಲ ವೇತನ | ನಿಗದಿ ಮಾಡಬೇಕಾಗಿದ್ದ ಮೂಲ ವೇತನ | ಷರಾ |
|---|---|---|---|---|---|
| 8 | 17000–400–18600–450–20400–500–22400–550–24600–600–27000–650–28950 | 01–07–2017 | 18600/– | 28950/– | ಸರ್ಕಾರಿ ಆದೇಶ ಸಂ/ಎಫ್‌ಡಿ/06 /ಎಸ್‌ಆರ್‌ಪಿ/2018 ದಿನಾಂಕ:19–04–2018ರ ಪ್ರಕಾರ ದಿ:01–07–2017ಕ್ಕೆ |
| 9 | 17000–400–18600–450–20400–500–22400–550–24600–600–27000–650–28950 | 01–10–2017 | 19050/– | 28950+650=29600/– | 6ನೇ ಸ್ಥಗಿತ ವೇತನ ಬಡ್ತಿ |
| 10 | 17000–400–18600–450–20400–500–22400–550–24600–600–27000–650–28950 | 01–10–2018 | 19500/– | 28950+650+650= 30250/– | 7ನೇ ಸ್ಥಗಿತ ವೇತನ ಬಡ್ತಿ |
| 11 | 17000–400–18600–450–20400–500–22400–550–24600–600–27000–650–28950 | 01–07–2019 | 19950/– | 28950+650+650+650 =30900/– | 8ನೇ ಸ್ಥಗಿತ ವೇತನ ಬಡ್ತಿ |
| 12 | 17000–400–18600–450–20400–500–22400–550–24600–600–27000–650–28950 | 01–07–2020 | 20400/– | 30900/– | ವಾರ್ಷಿಕ ವೇತನ ಬಡ್ತಿ ಲಭ್ಯವಿಲ್ಲ |

Finance Officer
Hassan Institute of Medical Sciences
HASSAN - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಕ್ರಸಂ | ವೇತನ ಶ್ರೇಣಿ | ಸೇವೆಗೆ ಸೇರಿದ ದಿನಾಂಕ | ನಿಗದಿ ಮಾಡಿರುವ ಮೂಲ ವೇತನ | ನಿಗದಿ ಮಾಡಬೇಕಾಗಿದ್ದ ಮೂಲ ವೇತನ | ಷರಾ |
|---|---|---|---|---|---|
| 13 | 17000–400–18600–450–20400–500–22400–550–24600–600–27000–650–28950 | 01–07–2021 | 20900/– | 30900/– | ವಾರ್ಷಿಕ ವೇತನ ಬಡ್ತಿ ಲಭ್ಯವಿಲ್ಲ |
| 14 | 18600–450–20400–500–22400–55024600–600–27000–650–29600–750–32600 | 20–10–2021 | 21400/– | 31100/– | 10 ವರ್ಷಗಳ ಕಾಲಬದ್ದ ವೇತನ ಬಡ್ತಿ ಶ್ರೇಣಿ ರೂ. 18600–32600 ರಲ್ಲಿ ವೇತನದ ಹಂತ ರೂ.31100/– ಕ್ಕೆ ನಿಗದಿಗೊಳಿಸಿದೆ |
| 15 | 18600–450–20400–500–22400–55024600–600–27000–650–29600–750–32600 | 01–07–2022 | 21900/– | 31850/– | Stage fitment |

**ತೀರ್ಮಾನ:**

ಹಿಮ್ಸ್ ಸಂಸ್ಥೆಯಲ್ಲಿ ಮಿಲಿಟರಿ ಸೇವೆಯಿಂದ ನಿವೃತ್ತಿ ಹೊಂದಿ ಮಾಜಿ ಸೈನಿಕ ಕೋಟಾದಡಿ ನೇಮಕಾತಿಗೊಂಡಿರುವ ಇಬ್ಬರು ನೌಕರರಿಗೆ ಕೆ.ಸಿ.ಎಸ್.ಆರ್. ನಿಯಮ 41(ಸಿ) ಉಪನಿಯಮ (iv)ರನ್ವಯ ವೇತನ ಸಂರಕ್ಷಣೆ ನೀಡುವ ಕುರಿತು ಪ್ರಸ್ತಾವನೆಯನ್ನು ಪರಿಶೀಲಿಸಲು ಮತ್ತು ಆರ್ಥಿಕ ಇಲಾಖೆಯ ಸಹಮತಿ ಪಡೆಯಲು, ಏಕ ಕಡತದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ತೀರ್ಮಾನಿಸಿತು.

Finance Officer
Hassan Institute of Medical Sciences
HASSAN - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

## ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

# ಅಜೆಂಡಾ ಕ್ರಮ ಸಂಖ್ಯೆ: 21

ವಿಷಯ: ಸಂಸ್ಥೆಯಲ್ಲಿ ವಿವಿಧ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರ ವೈದ್ಯಕೀಯ ವೆಚ್ಚದ ಅರ್ಹ ಮೊತ್ತವನ್ನು ಘಟನೋತ್ತರ ಅನುಮೋದನೆ ಮೇರೆಗೆ ಪಾವತಿಸಿರುವುದನ್ನು ಅನುಮೋದಿಸುವ ಬಗ್ಗೆ.

ಉಲ್ಲೇಖ: ದಿನಾಂಕ:22.11.2019 ರಂದು ನಡೆದ 22ನೇ ಆರ್ಥಿಕ ಸಮಿತಿಯ ನಿರ್ಣಯಗಳು.

*-*-*

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯು ಸ್ವಾಯತ್ತ ಸಂಸ್ಥೆಯಾಗಿದ್ದು, ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರುಗಳ ವೈದ್ಯಕೀಯ ವೆಚ್ಚ ಮರುಪಾವತಿಸಲು ಸಿಜಿಹೆಚ್‌ಎಸ್ ನಿಯಮಾನುಸಾರ ಬಿಲ್ಲುಗಳನ್ನು ಪರಿಶೀಲಿಸಿ ಅರ್ಹ ಮೊತ್ತಕ್ಕೆ ಜಿಲ್ಲಾ ಶಸ್ತ್ರ ಚಿಕಿತ್ಸಕರು ಮೇಲು ಸಹಿಯೊಂದಿಗೆ ಧೃಢಿಕರಿಸಿರುತ್ತಾರೆ, ಸದರಿ ಮೊತ್ತವನ್ನು ಅರ್ಹ ಸಿಬ್ಬಂದಿಗಳಿಗೆ ಆರ್ಥಿಕ ಸಮಿತಿ ಮತ್ತು ಆಡಳಿತ ಮಂಡಳಿ ಸಭೆಗಳ ಘಟನ್ನೋತ್ತರ ಅನುಮೋದನೆ ಮೇರೆಗೆ ಪಾವತಿಸಿ ನಂತರ ಸಂಬಂಧಿತ ಸಭೆಗಳಲ್ಲಿ ಅನುಮೋದನೆ ಪಡೆಯುವಂತೆ ಸಂಸ್ಥೆಯ 22ನೇ ಆರ್ಥಿಕ ಸಮಿತಿ ಸಭೆಯಲ್ಲಿ ನಿರ್ಣಯ ಕೈಗೊಂಡಿರುವ ಹಿನ್ನೆಲೆಯಲ್ಲಿ, ಕೆಳಕಂಡ ಸಿಬ್ಬಂದಿವರ್ಗದವರಿಗೆ ವೈದ್ಯಕೀಯ ವೆಚ್ಚದ ಮರುಪಾವತಿಯ ಬಿಲ್ಲುಗಳನ್ನು ಪಾವತಿಸಲಾಗಿದ್ದು ಅನುಮೋದನೆಗಾಗಿ ವಿಷಯವನ್ನು ಆರ್ಥಿಕ ಸಮಿತಿ ಸಭೆಯ ಮುಂದೆ ಮಂಡಿಸಿದೆ.

| ಕ್ರಸ | ಹೆಸರು ಮತ್ತು ಪದನಾಮ | ವೈದ್ಯಕೀಯ ಚಿಕಿತ್ಸೆ ಪಡೆದ ಆಸ್ಪತ್ರೆ | ಮರುಪಾವತಿಗಾಗಿ ಸಲ್ಲಿಸಿದ ಮೊತ್ತ | ಪಾವತಿಸಲು ದೃಢೀಕರಿಸಿರುವ ಅರ್ಹ ಮೊತ್ತ |
|---|---|---|---|---|
| 01 | ಡಾ.ಕೃಷ್ಣಮೂರ್ತಿ ವಿ.ಆರ್<br>ವೈದ್ಯಕೀಯ ಅಧೀಕ್ಷಕರು | ಸ್ವಂತ<br>ಮಹಾವೀರ್ ಜೈನ್ ಆಸ್ಪತ್ರೆ, ಬೆಂಗಳೂರು | 88392.00 | 79526.00 |
| 02 | ಅನಂತ. ಹೆಚ್.ಎಸ್.<br>ದ್ವಿ.ದ.ಸ. | ತಾಯಿ<br>ಜನತಾ ಆಸ್ಪತ್ರೆ, ಹಾಸನ. | 4114.00<br>19908.00 | 3914.00<br>13323.00 |
| 03 | ಶ್ರೀ ತೇಜೇಶ್ವರ್ ಎಂ.ಎಸ್ | ತಂದೆ<br>ಜಯದೇವ ಆಸ್ಪತ್ರೆ, ಮೈಸೂರು | 11027.00 | 9794.00 |

Finance Officer
Hassan Institute of Medical Sciences
HASSAN - 573 201



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| | | | | |
|---|---|---|---|---|
| 04 | ಶ್ರೀಮತಿ ಪಾರ್ವತಮ್ಮ ಹೆಚ್.ಎನ್.<br>ಕಛೇರಿ ಅಧೀಕ್ಷಕರು | ಸ್ವಂತ<br>ಶ್ರೀ ಚಾಮರಾಜೇಂದ್ರ ಆಸ್ಪತ್ರೆ<br>ಹಾಸನ. | 5591.00<br>22619.00 | 5591.00<br>22619.00 |
| 05 | ಶ್ರೀ ಸುರೇಶ್ ಹೆಚ್.ಎಸ್<br>ಶುಶ್ರೂಷಾಧಿಕಾರಿ | ತಾಯಿ<br>ಜನಪ್ರಿಯ ಆಸ್ಪತ್ರೆ, ಹಾಸನ. | 9141.00<br>16581.00 | 8941.00<br>16381.00 |
| 06 | ಶ್ರೀಮತಿ ಪವಿತ್ರ ಟಿ<br>ಪ್ರಥಮ ದರ್ಜೆ ಸಹಾಯಕರು | ಸ್ವಂತ<br>ಜನತಾ ಆಸ್ಪತ್ರೆ, ಹಾಸನ. | 7221.00<br>9085.00<br>8537.00 | 3901.00<br>8460.00<br>5477.00 |
| 07 | ಶ್ರೀಮತಿ ಮಮತ ಎಸ್ | ಸ್ವಂತ<br>ಜನತಾ ಆಸ್ಪತ್ರೆ, ಹಾಸನ.<br>ಸ್ಟೆನೋಗ್ರಾಫರ್ | 14004.00 | 10123.00 |
| 08 | ಶ್ರೀಮತಿ ಅನಿತ ಹೆಚ್.ಜಿ<br>ಪ್ರಥಮ ದರ್ಜೆ ಸಹಾಯಕರು | ತಾಯಿ<br>ಜನತಾ ಆಸ್ಪತ್ರೆ, ಹಾಸನ. | 1095.00<br>11310.00 | 894.00<br>11110.00 |
| 09 | ಶ್ರೀಮತಿ ಸಂಧ್ಯಾರಾಣಿ ಕೆ<br>ಪ್ರಥಮ ದರ್ಜೆ ಸಹಾಯಕರು | ಪತಿ<br>ಕಿದ್ವಾಯಿ ಬೆಂಗಳೂರು. | 8500.00 | 8300.00 |
| 10 | ಶ್ರೀಮತಿ ಭವ್ಯ<br>ದ್ವಿತೀಯ ದರ್ಜೆ ಸಹಾಯಕರು | ಸ್ವಂತ<br>ಮಂಗಳಾ ಆಸ್ಪತ್ರೆ, ಹಾಸನ. | 28587.00 | 23104.00 |
| 11 | ಡಾ.ಉಮಾದೇವಿ. ಹೆಚ್.ಆರ್.<br>ಚರ್ಮ ರೋಗ ತಜ್ಞರು | ಸ್ವಂತ<br>ಶ್ರೀ ಚಾಮರಾಜೇಂದ್ರ ಆಸ್ಪತ್ರೆ, ಹಾಸನ. | 8556.00 | 8556.00 |
| 12 | ಶ್ರೀಮತಿ ಕೃಷ್ಣವೇಣಿ ಡಿ.ಕೆ<br>ಗ್ರೂಪ್ ಡಿ | ಮಗಳು<br>ಮಂಗಳಾ ಆಸ್ಪತ್ರೆ, ಹಾಸನ | 3180.00<br>3650.00 | 2380.00<br>3435.00 |
| 13 | ಶ್ರೀ ಮಧುಸೂದನ್ ಜಿ.ಎನ್<br>ಗ್ರೂಪ್ 'ಡಿ' | ಸ್ವಂತ<br>ರಾಜೀವ್ ಆಸ್ಪತ್ರೆ ಹಾಸನ | 14287.00 | 7651.00 |

Finance Officer
Hassan Institute of Medical Sciences
HASSAN - 573 201



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| | | | | |
|---|---|---|---|---|
| 13 | ಶ್ರೀಮತಿ ಕವಿತ ಎಂ<br>ಶುಶ್ರೂಷಾಧಿಕಾರಿ | ಮಗಳು<br>ನಾರಾಯಣ ಆಸ್ಪತ್ರೆ ಬೆಂಗಳೂರು | 86685.00 | 22807.00 |
| 14 | ಶ್ರೀ ಅಣ್ಣಾಸ್ವಾಮಿ<br>ಪ್ರಥಮ ದರ್ಜೆ ಸಹಾಯಕ | ಸ್ವಂತ ಮತ್ತು ಪತ್ನಿ<br>ಶ್ರೀ ಚಾಮರಾಜೇಂದ್ರ ಆಸ್ಪತ್ರೆ,<br>ಜನತಾ ಆಸ್ಪತ್ರೆ, ಹಾಸನ. | 5600.00<br>3801.00<br>8000.00 | 4274.00<br>2441.00<br>7800.00 |
| 15 | ಶ್ರೀಮತಿ ಸಹನ<br>ಶುಶ್ರೂಷಾಧಿಕಾರಿ | ಸ್ವಂತ<br>ನಾರಾಯಣ ಹೃದಯಾಲಯ ಆಸ್ಪತ್ರೆ<br>ಬೆಂಗಳೂರು | 18898.00 | 18281.00 |
| 16 | ಶ್ರೀ ಪ್ರದೀಪ್ ಕೆ.ಎಸ್<br>ಡಯಾಲಿಸಿಸ್ ತಂತ್ರಜ್ಞರು | ತಾಯಿ<br>ಸಿ.ಎಸ್.ಐ ಆಸ್ಪತ್ರೆ, ಹಾಸನ. | 11800.00 | 11070.00 |
| 17 | ಶ್ರೀಮತಿ ವಿಜಯ ಡಿ.ಎಸ್ ಪ್ರಯೋಗಾಲಯ<br>ತಂತ್ರಜ್ಞರು | ಪತಿ<br>ಬಿ.ಜಿ.ಎಸ್ ಬೆಂಗಳೂರು | 99236.00 | 38982.00 |
| 18 | ಶ್ರೀ ಹೇಮಂತಕುಮಾರ ಹೆಚ್.ಸಿ<br>ಶುಶ್ರೂಷಾಧಿಕಾರಿ | ಸ್ವಂತ<br>ಹೆಚ್.ಸಿ.ಜಿ.ಆಸ್ಪತ್ರೆ, ಬೆಂಗಳೂರು. | 28152.00<br>32380.00 | 27552.00<br>32180.00 |
| 19 | ಶ್ರೀಮತಿ ಮಹಾಲಕ್ಷ್ಮಿ ಎಸ್<br>ಶುಶ್ರೂಷಾಧಿಕಾರಿ | ಸ್ವಂತ<br>ಶ್ರೀ ಚಾಮರಾಜೇಂದ್ರ ಆಸ್ಪತ್ರೆ, ಹಾಸನ. | 8541.00 | 8154.00 |
| 20 | ಶ್ರೀಮತಿ ಮೋಹಿನಿ ಹೆಚ್.ಎಸ್<br>ಶುಶ್ರೂಷಾಧಿಕಾರಿ | ಸ್ವಂತ<br>ಫಾದರ್ ಮುಲ್ಲಾ ಮಂಗಳೂರು | 23506.00 | 16587.00 |
| 21 | ಶ್ರೀಮತಿ ನಿರ್ಮಲ ಹೆಚ್.ಎಸ್ | ಸ್ವಂತ<br>ಶ್ರೀ ಚಾಮರಾಜೇಂದ್ರ ಆಸ್ಪತ್ರೆ<br>ಹಾಸನ. | 3084.00 | 2884.00 |
| 22 | ಶ್ರೀಮತಿ ಲೀಲಾ.ಎಸ್<br>ಡಯಾಲಿಸಿಸ್ ತಂತ್ರಜ್ಞರು | ಮಗಳು<br>ಸಿಎಸ್ಐ ಆಸ್ಪತ್ರೆ, ಹಾಸನ | 22352.00 | 6176.00 |

Finance Officer
Hassan Institute of Medical Sciences
HASSAN - 573 201



ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

| | | | | |
|---|---|---|---|---|
| 23 | ಶ್ರೀ ಶಿವಕುಮಾರ್ ಬಿ.ವಿ<br>ಹಿರಿಯ ಪ್ರಯೋಗಾಲಯ ತಂತ್ರಜ್ಞರು | ಸ್ವಂತ<br>ಮಂಗಳಾ ಆಸ್ಪತ್ರೆ, ಹಾಸನ | 19771.00 | 19571.00 |
| 24 | ಶ್ರೀ ಮಧು ಹೆಚ್.ಡಿ<br>ಗ್ರೂಪ್ 'ಡಿ' | ಪತ್ನಿ<br>ಕೇಶವ ನೇತ್ರಾಲಯ, ಹಾಸನ | 22917.00 | 12000.00 |
| 25 | ಡಾ.ಮನೀತ್.ಎಂ<br>ಹಿರಿಯ ಸ್ಥಾನೀಯ ವೈದ್ಯರು | ಪತ್ನಿ<br>ಕಾಂಗರೂ ಕೇರ್ ಆಸ್ಪತ್ರೆ, ಮೈಸೂರು | 76441.00 | 8000.00 |
| 26 | ಶ್ರೀ ನೌಷದ್ ಪಾಷಾ<br>ಫಿಸಿಯೋಥೆರಪಿಸ್ಟ್ | ಸ್ವಂತ<br>ಹಾಸನಾಂಬ ಆಸ್ಪತ್ರೆ, ಹಾಸನ. | 75573.00 | 45193.00 |
| | | ಒಟ್ಟು | **842122.00** | **537432.00** |

ನಿರ್ಣಯ:

ಸಂಸ್ಥೆಯಲ್ಲಿ ವಿವಿಧ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರ ವೈದ್ಯಕೀಯ ವೆಚ್ಚದ ಅರ್ಹ ಮೊತ್ತವನ್ನು ಘಟನೋತ್ತರ ಅನುಮೋದನೆ ನಿರೀಕ್ಷಿಸಿ ಸಿ.ಜಿ.ಹೆಚ್.ಎಸ್. ದರದನ್ವಯ ನಿಯಮಾನುಸಾರ ಪಾವತಿಸಿರುವುದನ್ನು ಪರಿಶೀಲಿಸಿ ಆರ್ಥಿಕ ಸಮಿತಿಯು ಅನುಮೋದಿಸಿತು.

'ವಂದನೆಗಳೊಂದಿಗೆ ಸಭೆಯು ಮುಕ್ತಾಯವಾಯಿತು'

ಆರ್ಥಿಕ ಸಲಹೆಗಾರರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ, ಹಾಗೂ ಸದಸ್ಯ ಕಾರ್ಯದರ್ಶಿಗಳು,
ಆರ್ಥಿಕ ಸಮಿತಿ ಸಭೆ, ಹಿಮ್ಸ್, ಹಾಸನ.

ನಿರ್ದೇಶಕರು ಹಾಗೂ ಡೀನ್,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ. ಹಾಗೂ ಸದಸ್ಯರು,
ಆರ್ಥಿಕ ಸಮಿತಿ ಸಭೆ, ಹಿಮ್ಸ್, ಹಾಸನ.

ನಿರ್ದೇಶಕರು,
ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ,
ಹಾಗೂ ಸದಸ್ಯರು,
ಆರ್ಥಿಕ ಸಮಿತಿ ಸಭೆ,
ಹಿಮ್ಸ್, ಹಾಸನ.

ಅಪರ ಕಾರ್ಯದರ್ಶಿಗಳು,
ವೈದ್ಯಕೀಯ ಶಿಕ್ಷಣ ಇಲಾಖೆ, ಹಾಗೂ
ಸದಸ್ಯರು, ಆರ್ಥಿಕ ಸಮಿತಿ ಸಭೆ,
ಹಿಮ್ಸ್, ಹಾಸನ.

ಸರ್ಕಾರದ ಕಾರ್ಯದರ್ಶಿಗಳು,
ವೈದ್ಯಕೀಯ ಶಿಕ್ಷಣ ಇಲಾಖೆ
ಹಾಗೂ ಅಧ್ಯಕ್ಷರು,
ಆರ್ಥಿಕ ಸಮಿತಿ ಸಭೆ, ಹಿಮ್ಸ್,
ಹಾಸನ.

Finance Officer
Hassan Institute of Medical Sciences
HASSAN - 573 201

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ